ಅಪ್ರತಿಮ ಸುಂದರ ಕರಕುಶಲತೆ
ಪರಿಪೂರ್ಣತೆಯ ಹಂತದ ಸಂತೃಪ್ತಿ
ಗ್ಲೆನಿಶಿಯಾ ಡಿಸೈನರ್
ಡೋರ್ & ಗ್ಲೆಶು ಫರ್ನಿಚರ್
ನಂದಳಿಕೆ, ವಯಾ ಬೆಳ್ಮಣ್, ಕಾರ್ಕಳ ತಾಲೂಕು
ಫೋನ್: 08258-274075, 285060
ಶೋರೂಂ, ನಂದಳಿಕೆ
ಸಹ ಸಂಸ್ಥೆ: ಜೀನಸ್ ವುಡ್ ಇಂಡಸ್ಟ್ರೀಸ್ ಸೊಮಿಲ್, ನಂದಳಿಕೆ
ಪ್ರೊ| ಗ್ರೆಗರಿ ಬಿ. ಮಿನೇಜಸ್(ಎಡ್ವಿ)

ಸಂಪಾದಕರು: ರೇಮಂಡ್ ಡಿ'ಕುನಾ
ಎಂ.ಎ. ಇನ್ ಜರ್ನಲಿಸಂ, ಬಿ.ಎ.,ಎಲ್.ಎಲ್.ಬಿ.
ESTD: 2004 E-mail:pingaara@gmail.com

20 ನೇ ವರ್ಷ

# ಪಿಂಗಾರ

ಮುಂಬೈ, ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳ ಏಕೈಕ ಪತ್ರಿಕೆ

Licensed to post without prepayment Licence No. SK/WPP / MNG / 183/2022-24

Regd. No.: MNG/954/2022-2024

impression
The Copier Solutions

- Multi Colour Copiers,
- Black & White Copiers
- Spiral Binding
- Spares & Toners
- Laser printer Catridges & Refill

Also we provide copiers for Rental
Lawrence - 9741885005, 9164845005
Impression12016@gmail.com
#3w-3-265, Near Marilyn Apartment,
Opp. AL helen, Bejai, Mangalore - 575 004
Canon Konica Minolta xerox KYOCERA EPSON

● RNI: KARKAN/2009/29901 ● ಸಂಪುಟ:20 ●ಸಂಚಿಕೆ:12 ● ಪುಟ:6 ● PINGARA Published & Posted on 18 May 2023 at M'luru Head Post Office ●ಮೇ 24, 2023 ● ಮಂಗಳೂರು, MANGALURU ● ಬೆಲೆ: ರೂ. 3

ತುಳು ಕಥೆ

## ನೇತ್ರಾವತಿ

ರಾಜನ ಇಲ್ಲಡ್ ಮದ್ಮೆದ ಗೌಜಿದ ಅಟನೆ ನಡತೊಂದುಂಡು. ಇಲ್ಲದ ಆನ್ ಮಗೆ ಆದ್ ಮೂಜಿ ತಂಗಡಿಯಲ್ಲೆನ್ಲ ಎಡ್ಡೆ ಕೋಡಿಗ್ ಎತ್ತಾಯಿನ ಕುಸಿ ಆಯಗುಂಡು. ಕಡೇಕ್ ಒರಿದಿನಾಲೆ ನೇತ್ರ. ಪ್ರಾಯೊದ ಬಂಡಿ ದುಂಬು ದುಂಬು ಪೋಂಡಲ ತನ್ನ ತರೆಟ್ ಇತ್ತಿ ಪುದೆನ್ ಸಾದಿ ಮುಟ್ಟಾಯಿ ಬೊಕ್ಕ ,ಬಾಕಿದ ಇಸಯಾಂದ್ ಮನೀಪಂದೆ ಕುಲ್ಲುದಿತ್ತಿನಾಯೆ ರಾಜೆ. ಅಪ್ಪೆ ಅಮ್ಮೆರೆನ್ ಕಲೆವೊನ್ನ ಜೋಕುಲೆಗ್ ಪಲಯೆನೆ ಮಲ್ಲ ಕೈತಾಂಗ್ ಆದಿತ್ತೆ. ಬೆಂದಿನ ಬೆಗರ್ಗ್ ತಿಕ್ಕಿ ಪಣವುನು ತಂಗಡಿಯಲ್ಲೆನ ಪೊಸ ಬದ್‌ಕ್‌ದ ಎಡ್ಡೆ ಕಜ್ಜೊಗು ಒಟ್ಟು ಮಲ್ತ್ ದೀವೊಂದಿತ್ತೆ. ಮೂಜಿ ಪೊನ್ನುಲು ಪಲಯೆ ತೂಯಿ ಆನನೊಟ್ಟುಗು ಮದ್ಮೆ ಆದ್ ಸುಕೊತ ಸಂಸಾರೊಡು ದುಂಬುಪೋವೊಂದುಲ್ಲೆರ್ ಐನ್ ಕಣ್ಣ್ ನಿಲೀಕೆ ತೂದು ಸಂತೊಸು ಪಡೆವೊಂದುಲ್ಲೆ. ಕಡೇತ ಪೊಣ್ಣೆ ಈ ನೇತ್ರ., ಪಲಯಗ್ ಒಂತೆ ಎಚ್ಚಿಗೆನೆ ಮೋಕೆ ಈ ನೇತ್ರಡ. ಅಪ್ಪೆ ಪೆದ್ದ್‌ದ್ ರಡ್ಡ್ ವರ್ಸ ಆನಗನೆ ರಾಜನ ಕೈಕ್ ಈ ಬಾಲೆನ್ ಪಾಡ್ದ್ ಅಕ್ಲೆ ಅಪ್ಪೆ ಪರಲೋಕ ಸಂದುದಿತ್ತೆರ್,ಅಂಚಾದ್ ಎಲ್ಯೆರ್ದ್ ಬೊಕ್ಕ ನೇತ್ರಡ ರಾಜಗ್ ಒಂತೆ ಎಚ್ಚಿಗೆನೆ ಕೊಂಡಾಟ. ತಾನ್ ಕಲ್ತ್‌ಜಿಂಡಲ ಕಡೇತ ತಂಗಡಿನ್ ಮಾತ್ರ ಒಯ್ಕ್‌ಲ ಕಮ್ಮಿಯಾವಂದಿಲೆಕ ಪೇಂಟೆಡ್ ಎಡ್ಡೆ ಕಲ್ಪಾಯೆ. ನೆತ್ತೆರ್ನ್ ಬೆಗರ್ ಮಲ್ತ್ ಇರ್ಲ್ ಪಗೆಲ್ ಪುನೆದ್ ಎಡ್ಡೆ ಬೇಲೆ ತಿಕ್ಕುನಡೆ ಮುಟ್ಟಲ ಒವ್ವೇ ಕುಂದು ಕೊರತೆ ಬರಂದಿಲೆಕ ಗರು ಮುಟ್ಟಾಯೆ. ಪೇಂಟೆಡ್ ಕಲ್ತಿನ ನೇತ್ರಗ್ ಪಾಸಾಡಿನಕ್ಲ್ ಒಂತೆ ಎಚ್ಚಿಗೆ,ಆಂಡಲ ಪಲಯೆ ಪಂಡ ಜೂವದ ಗಂಟ್.

ಬಾಲೆ ಪೋದು ಜವ್ವನ್ದಿ ಆಯಿನ ನೇತ್ರಗ್ ಎಡ್ಡೆ ಆನನ್ ತೂದು ಮದ್ಮೆ ಮಲ್ಪೆರೆ ಪಿದಡ್ನಾಯೆ ರಾಜೆ. ಮಾತಲ ರಾಜೆ ಎನ್ನಿಲೆಕಾನೆ ಆವೊಂದುಲ ಪೋಂಡು. ಆ ಪೊರ್ಲುದ ದಿನ ಬತ್ತ್‌ದ್ ಕಣ್ಣ್‌ದರುಟು ಮಿನ್ಕೆರೆ ಸುರುವಾಂಡ್. ಮದ್ರೆಂಗಿದ ದೊಂಪದಡಿಟ್ ತನ್ನ ತಂಗಡಿನ್ ಮದ್ಮಾಲೆನ ದುತ್ತೈತಡ್ ತೂದು ಆಚಿರೊಡೊರ ಕಣ್ಣ್ ಮಗ್‌ತ್‌ನಾಯಗ್ ಮುರಾನಿದ ಬಾಲೆ ನೇತ್ರ ಈತ್ ಬೇಗ ಈತ್ ಮಲ್ಲೆ ಆಯಲಾಂದ್ ಆಚಿರ ಆದ್ ಪೋಂಡ್. ಮೋಕೆ ಪಂಡ ಅಂಚೆನೆ ತನ್ನ ತಂಗಡಿಯಲ್ಲು ಏತ್ ಮಲ್ಲೆ ಆಂಡಲ ಮೋಕೆ ಮಲ್ಪಿ ಜೂವೊಗು ಅವ್ ಬಾಲೆದ ರೂಪೊನೆ ತೋಜಾವುಂಡು. ಮದ್‌ರೆಂಗಿದ ತೆಲಿಕೆ ನಲಿಕೆದ ಇರ್ಲ್ ಕರಿದ್ ಪುಲ್ಯ ಡಿಬ್ಬಣೊದ ಗೌಜಿಗ್ ಪೊರ್ತು ಲೆತ್ತೊಂದುಂಡು. ಏತೋ ದಿನೊದಿರ್ಂಚಿ ಕಾತೊಂದಿತ್ತಿ ರಾಜನ ಕನ ಸತ್ಯ ಆಪುನ ಗಳಿಗೆ ಬತ್ತ್ ಮುಟ್ಟ ಸೇರೊಂದುಂಡು..

ಮಾತೆರ್ಲ ಐತ ಆಪುನ ಅಟ್ಟನೆಡ್ ಉಲ್ಲೆರ್, ಮದ್ಮೆದ ಇಲ್ಲಡ್ ಜೋಕುಲೆ ಗೌಜಿ ಒಂಜಿ ಮೈಟಾಂಡ ಪರಬೆರ್ನ ಅಜಕೆ ಕುಡೊಂಜಿ ಮೈಟ್.

ಮದಿಮಾಲ್ ದಾನೆ ನನಲ ಲಕ್ಕಿಯಿಜಲ್ ಮೂರ್ತ ದಾನೆ ನಮನ್ ಕಾಪುಂಡ..? ಪ್ರಾಯದರ್ನ ಪಾತೆರೊಗು ಬಿಲೆ ಕೊರ್ನ ರಾಜುನ ಬೆರಿರ್ದ್ ಬತ್ತಿ ತಂಗಡಿ ಮೀನ ಪದ್ದುನು ಲೆಪ್ಪೆರೇಂದ್ ಅದೆಕ್ ಪೋನಗ ಅಲ್ಪ ಇತ್ತಿನಿ ಉದ್ದೊಗು ಪಾಡ್ನ ಪಜೆ ಒಂಜಿ ತಲೆಂಬು ಒಂಜಿ ಅಡಿಕ್ ಬುಡ್‌ಂಡ ನೇತ್ರ ಅಲ್ಪ ತೋಜೊಂದಿ ಜ್ಞಾಂಡ್. ಇರ್ಲ್ ಆತ್ ಪೊರ್ಲುಡು ತೆಲಿಕೆನಲಿಕೆಡ್ ಮದ್ರೆಂಗಿ ದೊಂಪದ ಡಿಟ್ ತೆಲಿಕೆದ ಪನಿ ಕುಡ್ತೊಂದಿತ್ತಿ ನೇತ್ರ ಪುಲ್ಯಾನಗ ಜೆತ್ತಿನ ಜಾಗೆಡ್ ಇಜ್ಜಂದೆ ಆನಗ ಪಲಿನ ಕೈಕಾರ್ ಕುಂಬರೆರೆ ಸುರುವಾಂಡ್. ಸೇಂಕೊಂದು ಪಾರ್‌ಬತ್ತ್‌ನಾಲ್ ಪಲಯನ ಕೆಬಿತೊಟ್ಟೆಗ್ ತೂಯಿಸತ್ತ್ಯೊನು ತೆರಿಪಾನಗ, ಕಲ್ಲ್ ಜೂವಲ ಒರ ಕುಸ್ಕುದು ಅಸ್‌ದ್ ಪೋಂಡು. ಪೊಣ್ಣು ತೋಜ್ಜಲ್ಗೇಂದ್ ಊರುಗು ಊರೇ ಸುದ್ದಿಯಾಪುನೆಕ್ ದುಂಬು ನೇತ್ರನ್ ಮದ್ಮೆದ ಜಾಲ್‌ಗ್ ಎತ್ತಾವೊಡೂಂದ್ ಬತ್ತಿ ಬಿನ್ನೆರ್ ಮಾತ ಅಟ್ಟಮುಟ್ಟ ಪೂರ ನಾಡ್ಯೆರ್, ಆಂಡ ನೇತ್ರ ಏರ್ನ ಕಣ್ಣ್‌ಗ್‌ಲ ಬೂರ್ಜಲ್.



ಗಂಟೆದ ಮುಲ್ಲು ಏಳೆತಂಚಿ ಎತ್ತ್‌ದಾತ್‌ಂಡ್. ಮೋನೆ ಮೋನೆ ತೋಜುನ ಪೊರ್ತವು'ಊರುಗೂರೆ ಮದ್ಮೆಗ್ ಪಿದಡುನ ಅಟ್ಟನೆಡುಂಡು ,ಅಂಚೆನೆ ಆಯೆರೆದ ಕಮಲಕ್ಕಳ ಅಮಸರಮಸರೊಡು ಇಲ್ಲದ ಬೇಲೆ ಮುಗಿತೊಂದು ನನ ಬೇಗ ನಾಲ್ ಕೊಡಪನ ನೀರ್ ಇಲ್ಲಗ್ ಎತ್ತಾವೆಂದ್ ಗಾಮೆರ್ಂಟ್ ಗುವೆಲ್ದಂಚಿ ಬತ್ತಿನಾರ್ ,ಕೊಡಪ್ಪನಗ್ ಬಲ್ಲ್ ತಿಕ್ಕಾದ್ ಗುವೆಲ್‌ಗ್ ಎಕ್ಕಲೊಡುಂದಾಂಡ ಅರ್ನ ಅಕಲೆ ತಪ್ಪುನಂಚಿನ ಸತ್ಯೊನು ತೂದು ಅಲ್ಕ್‌ದ್ ಬೂರ್ಯೆರ್. ಗುವೆಲ್ದ ಉಲಯಿ ಉಸುಲು ಕಡಿದ್ ಮೀಂದೊಂದಿತ್ತಿ ನೇತ್ರ ಕಮಲಕ್ಕನ್ ಮಸೇದ್ ತೂಯಲ್.ಅಕಲ್ ಪಾರ್ನ ಕಮಲಕ್ಕ ಕೊಡಪನೊನು ಬುಡ್ದು ಅರಿಯಮುರಿಯ ಬೊಬ್ಬೆ ಪಾಡೊಂದು ಊರುನೊಟ್ಟು ಸೇರಾಯೆರ್. ಇಸಯ ಊರುಗೂರೆ ಪರತೊಂದು ಪೋಂಡು. ಮದಿಮೆದ ಇಲ್ಲ್ ಮಸಣೊದ ಜಾಲಾಂಡ್. ರಾಜೆ ಕೈ ಕಾರ್ ಪಂದಯೆರಾವಂದೆ ಕಣನೀರ ಒಸರ್ ಜಪುಡಾಯೆ. ಸೈತಿನಾಲ್ ಪಿರ ಬರುವಲ್ಲಾ...?

✍ ಚೇತನ್ ವರ್ಕಾಡಿ
ತುಲುವೆರೆ ಕ್ರಲಾ ಕುಡ್ಲ

4ನೇ ಪುಟದಲ್ಲಿ ಮುಂದುವರಿಯುವುದು

ALVA'S NEET ACADEMY
ALVA'S Education Foundation
Vidyagiri-Moodubidire - 574 227

Remarkable Achievement
392 Students joined MBBS this year 2023
ADMISSIONS OPEN
LONG TERM NEET 2024
REPEATERS' BATCH
27 YEARS EXPERIENCE IN COACHING FOR COMPETITIVE EXAMS
NEET RANK ENHANCEMENT PROGRAM
Special fee concession for those who have scored above 300 marks in previous NEET exam.
- Experienced Faculty.
- Weekly NEET mock tests.
- Cumulative testing.
- Affordable fees.
- Individual attention.
- Everyday Doubt solving Sessions.
- Daily guided study hours.
- Extensive chapterwise study material.
- Separate Hostel for Boys & Girls within Campus.
- More than 300 NTA-NEET model papers with solution.

Safe campus with 24x7 Medical Facility
8884477588, 8884499737, 8884499747, 6366377823
Visit: www.edu.alvas.org
We have no other Branch

ಸಂಪಾದಕೀಯ

# ಆಹಾರದ ಸಮಸ್ಯೆಯಲ್ಲ.

ರೇಮಂಡ್ ಡಿಕುನಾ ತಾಕೊಡೆ



ಇಂದಿನ ಕಾಲ ಘಟ್ಟಕ್ಕೆ ಆಹಾರದ ಸಮಸ್ಯೆ ಕಡಿಮೆಯಾಗಿದೆ. ಬದಲಿಗೆ ತಿಂದುದನ್ನು ಕರಗಿಸುವ ಸಮಸ್ಯೆಯಿಂದ ಬಳಲುವಂತಾಗಿದೆ. ಸಂಹನ ಸಮಸ್ಯೆ ಕಡಿಮೆಯಾಗಿದೆ. ಆದರೆ ಅದರಿಂದ ಆಗುವ ಅಪನಂಬಿಕೆಗಳಿಂದಲೇ ಸಮಸ್ಯೆಗಳಾಗುತ್ತಿವೆ. ಪ್ರೀತಿ ಹೆಚ್ಚಾಗಿದೆ. ಆದರೆ ಅದರಿಂದ ಉಸಿರುಗಟ್ಟಿಸಿಕೊಂಡು ಸೃಜನಶೀಲತೆ ಕಡಿಮೆಯಾಗು ತ್ತಿದೆ. ಆಡಳಿತ ಮಾಡುವವರು ಬೇಕಾದಷ್ಟು ಆಗಿದ್ದಾರೆ. ಆಡಳಿತಕ್ಕೊಳಪಟ್ಟವರು ಕಡಿಮೆ ಆಗುತ್ತಿದ್ದಾರೆ.

ಪ್ರತಿಯೊಬ್ಬರೂ "ಗುರ್ಕಾರ್ಮೆ'' ನಡೆಸಲು ಮುಂದಾಗಿ ಗೊಂದಲ, ಗೋಜಲು ಆರಂಭವಾಗಿದೆ. ಒಮ್ಮೆ ಸ್ವಯಂಸೇವೆ ಕೆಲಸ ಮಾಡುವವರು ಒಬ್ಬರು ತನ್ನ ಸಮಯ ವ್ಯಯ ಮಾಡುವ ದಿನಚರಿಯನ್ನು ಉತ್ಸಾಹದಿಂದಲೇ ಹೇಳುತ್ತಿದ್ದರು.

ಅವರದು ಬಹಳ ಒಳ್ಳೆಯ ಸೇವೆ ನನಗೂ ಮೆಚ್ಚುಗೆಯಾಯಿತು. ಬೇರೇನಿಲ್ಲ, ಸದ್ರಿಯುವರು ಸ್ಥಿತಿವಂತರು. ಸಂಬಳಕ್ಕೆ ಸೇವೆ ಮಾಡುವವರಲ್ಲ. ನನ್ನ ಮಟ್ಟಿಗೆ ಸ್ಥಿತಿವಂತರು, ತನ್ನ ಸ್ವಂತ ಖರ್ಚಿನಲ್ಲಿ ಈ ಎಲ್ಲಾ ಕೆಲಸ ಮಾಡಿ ಸಮಾಜಕ್ಕೆ ಮಾಡುವುದು ಒಳ್ಳೇದೇ ಆಗಿತ್ತು. ನಂತರದಲ್ಲಿ ಈ ಸೇವೆಯು ಕೊನೆಯ ಪೈಸೆಯನ್ನೂ ಖರೀದಿಸಲ್ಪಟ್ಟದ್ದು ಎಂದು ತಿಳಿದಾಗ ಮಾತ್ರ ದಂಗಾದೆ.

ದೊಡ್ಡದಾದ ಅವರ ಕಾರಿಗೆ ತಿಂಗಳಿಗಿಷ್ಟು ಫ಼ೂಲ್ ಖರ್ಚು (ಸಾವಿರ ಗಳಲ್ಲಿ); ಬಂದ ಅತಿಥಿಗಳಿಗೆ ತರಿಸುವ ಉಟೋಪಚಾರ ತಿಂಡಿ ಖರ್ಚು; ಬೇರೆ ಕಡೆ ಸಭೆಗೆ ಹೋದ ಖರ್ಚು, ನಂತರ ತಿಂಗಳಕೇರಿಗೆ ಗೌರವಧನ ಸ್ವಲ್ಪ ಸಾವಿರಗಳಲ್ಲಿ...

ಮಹನೀಯರು ಈ ಸೇವೆಗೆ ಪತ್ರಿಕಾ ಪ್ರಚಾರ ಉಚಿತ ಪಡೆಯುವುದು. ಆಗಾಗ ಬೋನಸ್ ದೊರೆತಂತೆ ಸನ್ಮಾನ ದೊರೆಯುವುದು, ಫೆಸ್ಟಿವಲ್ ಗಿಫ್ಟ್ ನಂತೆ, ಮುಖ್ಯ ಅತಿಥಿಯಾಗಿ ಈ ಸಂಸ್ಥೆಯ ಹೆಸರು ಜೋಡಿಸಿ ಹೋಗುವುದು, ಕರ ಪಾವತಿಸುವ ಮೊದಲಿನ ಲಾಭದಂತೆ... ಹೀಗೆಲ್ಲಾ...

ನಾನು ನನ್ನನ್ನೇ ಹಳಿಸಿಕೊಂಡೆ. ಮೂರ್ಖ... ನಾನು...

ಇದೆಲ್ಲಾ ತಿಳಿದೇ ಇಲ್ಲದವ ಈ ವ್ಯವಹಾರಿಕ ಲೋಕದಲ್ಲಿ ಬದುಕಲು ಎಷ್ಟು ಯೋಗ್ಯ ಎಂದು ನನ್ನ ಕೆನ್ನೆಗೆ ನಾನೇ ಏಟೊಂದು ನೀಡಿ ಸುತ್ತಲೂ ನೋಡಿದೆ. ಸದ್ಯಕ್ಕೆ ಎಲ್ಲರೂ ಅವರವರ ಪಾಡಿಗೆ ವ್ಯಸ್ಥರಾಗಿದ್ದರು...

ಇನ್ನೊಮ್ಮೆ ದಾನ ಸಂಗ್ರಹ ಮಾಡುವ ಉದ್ಯೋಗದವರು ಸಿಕ್ಕಿದರು. ಚಪ್ಪಲಿ, ಜುಬ್ಬಾ, ಪಾಯಿಜಾಮ, ಚೀಲ, ವಾಚು... ಎಲ್ಲವೂ ಪಡೆದ ದಾನವೇನೋ? ಆದರೆ ಬಡತನದ ಗುರುತಾಗಿತ್ತು... ಸಾವಿರಾರೂ ಆದರೂ ಬೆಲೆ ಬಾಳುವುದಿತ್ತು.

ತಮ್ಮೊಳಗೆ ವ್ಯವಸ್ಥೆ ಮಾಡಿ, ಬಂದ ದಾನದ ಹಣ ಸಂಗ್ರಹಕ್ಕೆ ವ್ಯಯ ಮಾಡಲು ಎಲ್ಲಾ ತರಹದ ವ್ಯಾಪಾರಿಗಳೂ ಸೇರಿ ಸಂಸ್ಥೆಗಳನ್ನು ನಡೆಸುವುದು ಇಂದಿನ ನಮ್ಮ ಸುತ್ತಲಿನ ಪ್ರಸ್ತುತತೆ.

ಇದಕ್ಕೆ ಯಾರೂ ಏನೂ ಹೇಳುತ್ತಿಲ್ಲಾ... ಯಾಕೆಂದರೆ, ಸಮಾಜದಲ್ಲಿ ದಾಂಧಲೆ ಮಾಡಿದ ಜನವೇ ಭದ್ರತಾ ಸಿಬಂದಿಯಾಗಿ, ಅದರ ಉಸ್ತುವಾರಿಗಳಾಗಿ ನೋಡಲು ಸುತ್ತಮುತ್ತ ಕಾಣುತ್ತಾರೆ. ಇಂದು ಎಲ್ಲಾ ತರಹದ ವ್ಯವಸ್ಥೆಗಳು ಅವ್ಯವಸ್ಥೆಯವರಿಂದಲೇ ಜೋಡಿಸಲ್ಪಡಲು ಜನರು ತಯಾರಾಗುತ್ತಾರೆ.

ನದಿಯ ನೀರು, ಹರಿವ ನೀರು, ಶುದ್ಧ ನೀರು ಎಂದು ಪಾಠವಿದ್ದ ಕಾಲದಲ್ಲಿ ನಾವು ಹುಟ್ಟಿದವರು. ಈಗ ಹರಿವ ನೀರು ನಿಲ್ಲಿಸಿ ಅದಕ್ಕೆ ಬ್ಲೀಚಿಂಗ್ । ಮತ್ತು ಕ್ಲೋರಿನ್ ಗೋಣಿಗಟ್ಟಲೆ ಸುರಿದು ಇದೇ ಶುದ್ಧ ನೀರು ಎಂದು ಸೇರಿಸಿದ ಬ್ಲೀಚಿಂಗ್ ಮತ್ತು ಕ್ಲೋರಿನ್ ವಿಷಗಳೊಡನೆ ಕುಡಿದು ಸಂತಸ ಪಡುವುದೇ ಜನ್ಮ ಆಗಿದೆ. ಇದರಿಂದ ಹಲ್ಲುಗಳೂ ಮೃದು ಆಗಿ ಚಕ್ಕುಲಿ, ಕೋಡುಬಳೆ ಮೆಲ್ಲುವಾಗಲೂ ಚಕ್ಕೆಗಲು ಹೋಗುವಂತಾಗಿದೆ.

ಯಾವುದು ಶುದ್ಧ? ಮಾತು ಶುದ್ಧವಾಗಿರಿಸಲು ಹೋದರೆ ಸತ್ಯ ಮಾತನಾ ಡುವವರಿಗಿಂತ ಸುಳ್ಳನ್ನು ಸತ್ಯದಂತೆಯೇ ಹೇಳುವವರಿಗೆ ಮಣೆ ಹಾಕಲಾಗುತ್ತಿದೆ. ಜನರು ಆಸಕ್ತಿಯಿಂದ ನೋಡಲೆಂದೇ ಆಕರ್ಷಕ ಬಟ್ಟೆ ಬರೆ ತೊಟ್ಟವ ರನ್ನು ನೋಡಿದರೆ ವಕ್ರದೃಷ್ಟಿ ಬೀರಿದರೆಂದು ಅಪಪ್ರಚಾರ ಮಾಡಿ ಜನ್ಮ ಜಾಲಾಡಿಸಿ ಬಿಡುವ ಕಾಲವಾಗಿದೆ.

ಆಸ್ವಾಧಿಸಲು ಹಲವು ಭಕ್ಷ್ಯಗಳನ್ನು ಮಾಡಿ ಓರಣವಾಗಿ ಜೋಡಿಸಿ ಟ್ಟಿದ್ದರೆ ಅದರ ಬಳಿ ತೆರಳಲು ಗೌರವಾನ್ವಿತತೆ ಮಾನ ಮರ್ಯಾದೆ ಎಂದುಬಿಟ್ಟು ನಾವೆಲ್ಲಾ ಬಾಲ್ಯದಲ್ಲಿ ಬಟ್ಟಲಲ್ಲಿ ಅನ್ನ ಪಲ್ಯ ಹಾಕಿ ಮನಸ್ಸ ಇಚ್ಛೆ ಉಂಡಂತೆ ಉಣ್ಣಲು ಮ್ಯಾನರ್ ಅಡ್ಡ ಬರುವಂತಾಗಿದೆ.

ದೇವರ ಕೆಲಸದಲ್ಲಿ ಆರಾಧನೆಗೆ ತೊಡಗಲು ಮುಂದಾದರೆ ಎಲ್ಲೆಲ್ಲೂ ದೇವಾಲಯಗಳಿಗೆ ಎತ್ತರ ಸಾಗರಗಳು ಕಟ್ಟಿ, ಹೊರಗೊಂದು ಗೇಟು ಇಟ್ಟು ಹುಂಡಿಯನ್ನು ದಾಟಿಯೇ ದೇವರ ದರ್ಶನಕ್ಕೆ ಬಳಿ ಸಾರುವಂತಾಗಿದೆ.

ಕಾಡಲ್ಲಿ ಮರದ ಬುಡದಲ್ಲಿ, ರಸ್ತೆ ಬದಿಯಲ್ಲಿ ಎಲ್ಲೆಲ್ಲೂ ಮುಕ್ತವಾಗಿ ಸಿಗುವ ದೇವರ ಮೂರ್ತಿ, ಮರ, ಕಟ್ಟೆಗಳೆಲ್ಲಾ ಉಸ್ತುವಾರಿಗಳ ಕೈಕೆಳಗೆ ಬಂದು ಅದಕ್ಕೊಂದು ಸಾಂಸ್ಕೃತಿಕ, ವ್ಯಾಪಾರಿತ್ವ ಬಂದು ವರ್ಷದಷ್ಟೋ ಬಾರಿ ಸುತ್ತು ಮುತ್ತಲಿನವರು ಈ ದೇವರಿಲ್ಲಿಂದ ತೊಲಗಲಿ ಎಂದು ಗುಣುಗುಟ್ಟುವಷ್ಟು ಆಗಿದೆ.

ಹಾಗಾದರೆ ಎಲ್ಲಿದೆ ದೈವತ್ವ ಇಲ್ವೆ? ಎನ್ನುವ ಮೂಲ ಪ್ರಶ್ನೆಗೆ ಕದ್ರಿ ಪಾರ್ಕ್‌ನಲ್ಲಿ ನಡೆದಾಗ ಎದುಸಿರಿನ ನಡುವೆ ಸಂಗಾತಿ ನಡೆದಾಡುವಾಗ ಹೇಳಿದ್ದ ಮಾತೊಂದು ಶಮನ ನೀಡಿದೆ.

ಪ್ರಕೃತಿ ತನ್ನದೇ ಪರಿಯಲ್ಲಿ ಯಾರ ಪರಿವೆಯೂ ಇಲ್ಲದೆ ಮುಂದುವರಿಯುತ್ತಿದೆ. ನಾವೆಲ್ಲಾ ನೋಡುವುದು ಜ್ವಾಲಾಮುಖಿಯನ್ನು, ಹೊಟ್ಟೆಯೊಳಗೆ ಹೊತ್ತು ತಿರುಗುವ ಈ ಶಾಂತವಾದ ಭೂಮಿ, ಪ್ರಖರ ಸೂರ್ಯನ ಹೆದರಿಕೆಗೋ ಅಥವಾ ಶಾಂತವಾದ ಚಂದ್ರನ ಮುಗುಳ್ನಗೆಗೋ ನಮ್ಮನ್ನೆಲ್ಲಾ ಸಹಿಸಿಕೊಂಡು ತಿರುಗುತ್ತಿದೆ.

ಆದರೆ ಸತ್ಯ ನೀತಿ ನ್ಯಾಯ ಪ್ರಮಾಣಿಕತೆ ಗಳಿಗೆ ತೀರಾ ಚ್ಯುತಿಯಾದಾಗ ಅಲ್ಲೊಬ್ಬ ಡಾಕು ಚಂಬಲ್‌ನಲ್ಲಿ ಬರುತ್ತಾನೆ. ಇಲ್ಲೊಂದು ವೀರಪ್ಪನ್ ಹುಟ್ಟುತ್ತಾನೆ. ಅವರನ್ನು ಮಟ್ಟ ಹಾಕಲು ಪಡಿಪಾಟೀಲು ಪಡಬೇಕಾಗುತ್ತದೆ.

ಇನ್ನು ಮೇಲ್ಗಡೆ ಹೋದರೆ ಹಿಂದೊಮ್ಮೆ ಬಂಗಾರದ ದೇವಾಲಯದಲ್ಲಿ ಮಿಲಿಟರಿ ಒಳಹೊಕ್ಕು ಮಾಡಿದ ಶುದ್ದೀಕರಣವೂ, ಎರಡು ಸಾವಿರ ವರುಷಗಳ ಹಿಂದೆ ಯೇಸುವು ಚಾಬೂಕು ಹಿಡಿದ ಸತ್ಯವೂ ಒಂದಕ್ಕೊಂದು ತಾಳೆಯಾದರೂ ಆಶ್ಚರ್ಯ ಪಡಬೇಕಿಲ್ಲ.

ನಾ ಕಲಿತ ಶಿಕ್ಷಣ, ನಾ ಮಾಡುವ ಹೊಟ್ಟೆಪಾಡು, ನಾ ಮಾಡುವ ಪ್ರಸಾದನಗಳನ್ನು ಬದಿಗಿಟ್ಟು ತನ್ನದಲ್ಲದ ಅನ್ನಕ್ಕೆ ಕೈಯಿಕ್ಕುವುದು ಅಸಹನೀಯ ವಾಗಿ; ಕಟ್ಟಕಡೆಯ ವ್ಯಕ್ತಿ ನೋವು ಸಹಿಸಲಾಗದೆ ಬಾಯಿ ಬಿಟ್ಟಾಗ ಆ ಉಗ್ರ ಪ್ರಕೃತಿಯ ಜ್ವಾಲೆ ಬಂದು ನಾಲಗೆ ಚಾಚಿ ಮರು ಸ್ಥಾಪಿಸುವ ಶಾಂತಿಯ ಮೊದಲು ಮಾಡುವ ಪ್ರಕ್ರಿಯೆ ನಡೆದೇ ನಡೆಯುತ್ತದೆ.

ಅದೇ ಧರ್ಮ, ಅದೇ ಸತ್ಯ, ಅದೇ ನ್ಯಾಯವಾಗಿ ಉಲ್ಲೇಖವಾಗುತ್ತದೆ■

## ಮೆದುಳಿಗೊಂದು ಟಾನಿಕ್



*ಮಂಗಳೂರಿನ ಬೀಚುಗಳಲ್ಲಿ ಕಡಲು ಹಿಂದಿನಂತಿಲ್ಲದೆ ತೀವ್ರವಾಗಿದೆ ಎಂದರು ಹಿರಿಯ ಮರಕಾಲ ನಾಯಕರೊಬ್ಬರು.

*ಕಡಲ ಅಬ್ಬರದಿಂದ ಈಗ ಮೀನುಗಾರಿಕೆ ಕಷ್ಟವಾಗಿದೆ ಎಂದು ಮಲ್ಪೆಯಲ್ಲಿ ಮೀನು ಹಿಡಿಯುವವರೊಬ್ಬರು ಹೇಳಿದರು.


*ಮುಂಬಯಿ ಕಡಲ ಬದಿಯ ಕೊಳಚೆ ಪ್ರದೇಶ ಗಣೇಶ ನಗರ ಈಗ ಕಡಲ ನೀರಿಗೆ ಬೀಳುತ್ತಿದೆ.

*ಗುಜರಾತಿನ ದ್ವಾರಕದಿಂದ 285 ಕಿಮೀ ದೂರ ಕಡಲಲ್ಲಿ ವಾಯುಭಾರ ಕುಸಿತ ಉಂಟಾಗಿ ಜೂನ್ 24ರಂದು 180 ಕಿಮೀ ವೇಗದ ಗಾಳಿ ಬೀಸುತ್ತಿದೆ.

*1995ರ ಬಳಿಕ ಅರೇಬಿಯಾ ಸಮುದ್ರವು ತನ್ನ ಮೂಲ ಸ್ವರೂಪ ಬದಲಾಯಿಸುತ್ತ ಬರುತ್ತಿದೆ.

*ಹೆಚ್ಚು ಬಲದ ಸೈಕ್ಲೋನ್‌ಗಳು, ಬಿಸಿ ಚಳಿಗಾಲ, ಹೆಚ್ಚಿದ ಶಾಖ ಸೆಕೆ, ಕಡಿಮೆಯಾದ ದಶಕದ ಮುಂಗಾರು ಮಳೆ, ಕುಗ್ಗಿದ ಹಸಿರು (ಕೃಷಿ) ಹಾಸು.

*ಭೂಬಿಸಿ ಇಲ್ಲಿ ಸ್ಪಷ್ಟವಿದೆ



ಪ್ರತಿಗಳಿಗಾಗಿ ವಿಳಾಸದೊಂದಿಗೆ ರೂ.100 ಈ ನಂಬ್ರಕ್ಕೆ 9964126531 ಗೂಗಲ್ ಪೆ/ಫೋನ್ ಪೆ ಮಾಡಿ ಪ್ರತಿಯನ್ನು ನಿಮ್ಮ ಮನೆಗೆ ತರಿಸಿಕೊಳ್ಳಬಹುದು


## ಮಡಿಕೆ ನೀರಿನ ಮಹತ್ವ ಪುಣ್ಯ ನದಿಗಳ ಹೆಸರು...!!

ಸರಳ ಜೀವನದ ಬಗ್ಗೆ ಮಾತನಾಡಲು ಬರೆಯಲು ನಾವು ಹಿಂಜರಿಯುವುದಿಲ್ಲ ಆದರೆ ಹಾಗೆ ಬದುಕಲು ಮಾತ್ರ ಹಿಂಗೇರಿಯುತ್ತೇವೆ ಕಬ್ಬಿನ ಹಾಲು, ಕೋಲ್ಡ್, ಶರಬತ್ತು ಎಳನೀರು ಇವೆಲ್ಲ ಶರೀರ ತಂಪು ಮಾಡುತ್ತವೆ ಅನ್ನೋದು ಭ್ರಮೆ..! ನೀರೇ ಅದರಷ್ಟು ತಂಪು ಇನ್ನೊಂದಿಲ್ಲ ಅನ್ನೋದು ವಾಸ್ತವ ನಮ್ಮ ದೇಹದಲ್ಲಿ ಮುಕ್ಕಾಲು ಭಾಗ ನೀರು ದೇಶದಲ್ಲಿ ಭೂಮಿಯ ಮುಕ್ಕಾಲು ಭಾಗ ನೀರೇ ಇರುವುದು ಪ್ರತಿಭೆ ಎಲ್ಲರಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇದೆ ಅದನ್ನು ಸರಿಯಾಗಿ ಸದ್ಬಳಕೆ ಮಾಡಿದಾಗ ಎಂತಹ ಚಮತ್ಕಾರ ನಾವು ಅನಾದಿಯಿಂದಲೂ ಮಡಿಕೆ ನೀರು ಹೂಜಿಯಲ್ಲಿ ಬಿಸಿ ನೀರು ಕುಡಿದವರೆ ಆದರೆ ಇತ್ತೀಚೆಗೆ ಎಲ್ಲಾ ಮರೆಯಾಗಿ ಮದುವೆ ,ಸಭೆ, ಸಭಾ ಕಾರ್ಯಕ್ರಮದಲ್ಲಿ ಬಾಟಲ್ ನೀರೇ ಮುಖ್ಯ ಎಂಬಂತೆ ಬಿಂಬಿತ ಶುದ್ಧ ನೀರು ಎನ್ನುವಂತೆ ಇದರಿಂದಲೇ ಪರಿಸರಕ್ಕೆ ಪ್ಲಾಸ್ಟಿಕ್ ತ್ಯಾಜ್ಯವೇ....?.

ಜೀವನದಲ್ಲಿ ಒಂದೊಂದು ಘಟನೆಗಳು ಒಂದೊಂ ದು ಪಾಠವನ್ನು ಕಲಿಸುತ್ತದೆ. ಗಡಿನಾಡ ಧ್ವನಿ ಗಡಿನಾಡ ಶ್ರೇಯೋಭಿವೃದ್ಧಿ ಟ್ರಸ್ಟ್ ಆಡಳಿತ ವ್ಯವಸ್ಥೆಯು ಸದಾ ಚಿತ್ತ ಹರಿಸಲು ಮತ್ತು ವಿಶ್ವದೆಲ್ಲೆಡೆ ಗಡಿನಾಡ ಕನ್ನಡ ಸಮ್ಮೇಳನಗಳು ಮಹತ್ವ ಪಡೆದಿದೆ ಎಂಬ ಸದಾಶಯದ ನುಡಿಗಳು ಪಾಣಜೆ ಒಡ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ಕರ್ನಾಟಕ ಗಡಿನಾಡ ಸಮ್ಮೇಳನದಲ್ಲಿ ವ್ಯಕ್ತಗೊಂಡವು ಸರಕಾರಿ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಲ್ಲಿನ ಮುಖ್ಯೋ ಪಾಧ್ಯಾಯರು ಮತ್ತು ಶಿಕ್ಷಕ ವಿದ್ಯಾರ್ಥಿಗ ಳಿಂದ ಸಭಾಂಗಣದ ಮುಂಭಾಗದಲ್ಲಿ ಮೇಜಿನ ಮೇಲೆ ಬೈ ಹುಲ್ಲಿನ ಚೆರುವಿನ ಮೇಲೆ ಮಡಿಕೆ ಉರಳಿ ಬೀಳದಂತೆ ಎಚ್ಚರವಹಿಸಿ ಮಡಿಕೆಗಳನ್ನು ಒಂದೊಂದು ಮಡಿಕೆಗೂ ಒಂದೊಂದು ಹೆಸರು ತಪತಿ ,ಕಾವೇರಿ, ನೇತ್ರಾವತಿ, ಗೋದಾವರಿ ಎಂಬ ವಿಶೇಷ ನದಿಗಳ ಹೆಸರನ್ನು ಬಿಂಬಿಸಿ ಮೇಲ್ಭಾಗಕ್ಕೆ ಬಟ್ಟಲು ಗ್ಲಾಸ್ ಮುಚ್ಚಿಟ್ಟು ಕನ್ನಡಿ ಸ್ವಚ್ಛವಾಗಿದ್ದರೆ ಅದರ ಪ್ರತಿಬಿಂಬ ಸುಂದರವಾಗಿ ಕಾಣುತ್ತದೆ ಅದೇ ರೀತಿ ಮನಸ್ಸು ಸ್ವಚ್ಛವಾಗಿದ್ದರೆ ಇಡೀ ಜಗತ್ತೇ ಸುಂದರವಾಗಿ ಕಾಣುತ್ತದೆ . ನೀರು ಶುಭ್ರವಾಗಿ ದ್ದಾಗ ಪ್ರತಿಬಿಂಬ ಸುಂದರ ಹಾಗೆ ಮನಸ್ಸು ಪರಿಶುದ್ಧವಾಗಿದ್ದಾಗ ಇತರರು ಪರಿಪೂರ್ಣವಾಗಿ ಕಾಣುತ್ತಾರೆ ಹನಿ ಹನಿ ನೀರು ಅಮೂಲ್ಯ ಒಂದೊಂದು ಹನಿಯಾಗಿ ನೀರು ಬೀಳುತ್ತಿದ್ದರು ಒಂದಾ ನೊಂದು ಕಾಲಕ್ಕೆ ಗಡಿಗೆಯ ತುಂಬಾ ನೀರು ತುಂಬಿಕೊಳ್ಳುತ್ತದೆ.

## ಮಲ್ಪೆ ಮರಳಿನಂಗಳ ಇನ್ನು ದೂರದರ್ಶನ ಮಾತ್ರ



ಉಡುಪಿ ನಗರಸಭೆ ಪೌರಾಯುಕ್ತರು ಮತ್ತು ಮಲ್ಪೆ ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಯವರು ಹೇಳಿಕೆ ಹೊರಡಿಸಿ ಮಲ್ಪೆ ಬೀಚ್‌ನಲ್ಲಿ ಮೇ 16ರಿಂದ ಸೆಪ್ಟೆಂಬರ್ 15ರವರೆಗೆ ಎಲ್ಲ ಕಡಲ ಒಡಲ ಕಾರ್ಯಕ್ರಮಗಳನ್ನು ರದ್ದು ಪಡಿಸಲಾಗಿದೆ ಎಂದಿದ್ದಾರೆ.

ಕಡಲು ಮಳೆಗಾಲದಲ್ಲಿ ಭೋರ್ಗರೆಯುವುದರಿಂದ ಬರುವವರಿಗೆ ದೂರದಲ್ಲಿ ನಿಂತು ನೋಡಲು ಮಾತ್ರ ಅವಕಾಶವಿದೆ.

ಸೆಯಿಂಟ್ ಮೇರಿ ದ್ವೀಪಕ್ಕೆ ಬೋಟು ಬಿಡುವುದಿಲ್ಲ. ಸೀ ವಾಕ್, ಕಡಲ ಸಾಹಸ ಕ್ರೀಡೆಗಳು ಎಲ್ಲವಕ್ಕೂ ದೀರ್ಘ ರಜೆ. ದೂರದಲ್ಲಿ ನಿಂತು ಕಡಲ ತೆರೆ ನೋಡಬಹುದು.

## ಮಂಗಳೂರು ವಿವಿಯಲ್ಲಿ ಹೊಸ ಕೋರ್ಸ್‌ಗಳ ಆರಂಭ

ಶೈಕ್ಷಣಿಕ ವರ್ಷ 2023–24 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಬಹುಶಿಸ್ತೀಯ ಸ್ನಾತಕ ಕಾರ್ಯಕ್ರಮಗಳಾದ ಬಿ.ಎಸ್ಸಿ ಯೋಗವಿಜ್ಞಾನ, ಬಿ.ಎಸ್ಸಿ ಭೂಗೋಳಶಾಸ್ತ್ರ, ಬಿ.ಎಸ್ಸಿ ಜಿಯೋ ಇನ್ಫಾರ್ಮೆಟಿಕ್ಸ್ ಮತ್ತು ಬಿ.ಎಸ್ಸಿ ಇಲೆಕ್ಟ್ರಾನಿಕ್ಸ್ ಗಳನ್ನು ಪ್ರಾರಂಭಿಸಲಾಗಿದ್ದು, ಆಸಕ್ತರಿಂದ ಜೂನ್ 30 ರ ಒಳಗೆ ಯುಯುಸಿಎಂಎಸ್ ಲಿಂಕ್ https://uucms.karnataka.gov.in/Login/Index ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಯೋಗವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಕೆ ಕೃಷ್ಣ ಶರ್ಮ (9448241005), ಭೂಗೋಳಶಾಸ್ತ್ರ ವಿಭಾಗದ ಸಂಯೋಜಕ ಡಾ. ದಶರಥ ಅಂಗಡಿ (944888920) ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಎ ಎಂ ಖಾನ್ (9901752373) ಅವರನ್ನು ಸಂಪರ್ಕಿಸಬಹುದು, ಎಂದು ಕುಲಸಚಿವರ ಪ್ರಕಟಣೆ ತಿಳಿಸಿದೆ.

## ಪೈಲಟ್ ಪರವಾನಗಿ ಪಡೆದ ಮಂಗಳೂರಿನ ಬ್ಯಾರಿ ತರುಣಿ

ಸಣ್ಣಂದಿನಿಂದಲೂ ವಿಮಾನ ನಡೆಸುವ ಕನಸು ಕಂಡ ಕಾಪು ಮೂಲದ ಹಾಲಿ ಮಂಗಳೂರು ಪಾಂಡೇಶ್ವರ ನಿವಾಸಿ 21ರ ತರುಣಿ ಹನಿಯಾ ಹನೀಫ್ ಬ್ಯಾರಿ ಕಮರ್ಶಿಯಲ್ ಪೈಲಟ್ ಲೈಸೆನ್ಸ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮಂಗಳೂರಿನಲ್ಲಿ ಪದವಿ ಮುಗಿಸಿದ ಬಳಿಕ ಮೈಸೂರಿನ ಫ್ಲೈಟ್ಸ್ ಏವಿಯೇಶನ್ ಅಕಾಡೆಮಿ ಸೇರಿದ ಹನಿಯಾ ಒಟ್ಟು 206 ಗಂಟೆಗಳ ಯಶಸ್ವಿ ಹಾರಾಟದ ಬಳಿಕ ಕಮರ್ಶಿಯಲ್ ಪೈಲಟ್ ಲೈಸೆನ್ಸ್ ಪಡೆದಿದ್ದಾರೆ.

ತನ್ನ ಪೈಲಟ್ ಆಗುವ ಕನಸಿಗೆ ನೀರೆರೆದು ಪೋಷಿಸಿದ ತಂದೆ, ಅಜ್ಜ, ಮಾವಂದಿರ ಬಗೆಗೆ ಹನಿಯಾ ಹೆಮ್ಮೆ ಹೊಂದಿದ್ದಾಳೆ.


## ಮಂಗಳೂರು: ಪ್ರಾಚ್ಯ ವಸ್ತುಗಳ ವಿಶೇಷ ಪ್ರದರ್ಶನ



ಮಂಗಳೂರು: ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಅಂಗವಾಗಿ ಮೇ.18ರ ಗುರುವಾರ ಬೆಳಿಗ್ಗೆ 10 ಗಂಟೆಯಿಂದ ಪ್ರಾಚ್ಯ ವಸ್ತುಗಳ ಒಂದು ದಿನದ ವಿಶೇಷ ಪ್ರದರ್ಶನವನ್ನು ಮಂಗಳೂರಿನ ಬಿಜೈ ನಲ್ಲಿರುವ ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಅಂಚೆ ಚೀಟಿ ಮತ್ತು ನಾಣ್ಯಗಳ ಸಂಗ್ರಹಕಾರರ ಸಂಘದ ಸದಸ್ಯರಿಂದ ಈ ವಿಶೇಷ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚೀನಾದ ಸುಳ್ಳು ಸುದ್ದಿ ಹರಡುವ 1,07,000 ಆನ್‌ಲೈನ್ ಖಾತೆ ಮುಚ್ಚುಗಡೆ



ಸಿ ಎ ಸಿ – ಸೈಬರ್ ಎಡ್ಮಿನಿಸ್ಟ್ರೇಶನ್ ಆಫ್ ಚೀನಾ ಏಪ್ರಿಲ್‌ನಿಂದ ಸುಳ್ಳು ಸುದ್ದಿ ಹರಡುವ 1,07,000 ಆನ್‌ಲೈನ್ ಖಾತೆಗಳನ್ನು ಮುಚ್ಚುಗಡೆ ಮಾಡಿದೆ.

ಸೇನೆಯನ್ನು ಗೇಲಿ ಮಾಡಿದ ಮಿಲಿಟರಿ ಕಾಮಿಡಿ ಎಂದು ವೀಡಿಯೋ ಬಿಟ್ಟವರಿಗೆ ಸಿಎಸಿ 213 ಕೋಟಿ ಡಾಲರ್ ದಂಡ ವಿಧಿಸಿದೆ.

## ಅಮೆರಿಕಾಕ್ಕೆ ಹಾರಿದ ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ



ನಮ್ ಏರಿಯಾಲ್ ಒಂದು ದಿನ ಸಿನಿಮಾ ಮೂಲಕ ಚಿತ್ರ ರಂಗಕ್ಕೆ ಬಂದ ರಕ್ಷಿತ್ ಶೆಟ್ಟಿ ಈಗ ಕನ್ನಡ ಚಿತ್ರರಂಗದ ಸ್ಟಾರ್ ನಟರಲ್ಲಿ ಒಬ್ಬರಾಗಿದ್ದಾರೆ.

ಸದ್ಯ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ ಸ್ಯಾಂಡಲ್ ವುಡ್ ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ನಟನೆ ಜೊತೆಗೆ ರಕ್ಷಿತ್ ಶೆಟ್ಟಿ ಮತ್ತೆ ನಿರ್ದೇಶನಕ್ಕೂ ಮರಳಿದ್ದಾರೆ. 777 ಚಾರ್ಲಿ ಬಳಿಕ ರಕ್ಷಿತ್ ಮತ್ತೆ ತೆರೆಮೇಲೆ ಕಾಣಿಸಿಕೊಳ್ಳಲೇ ಇಲ್ಲ. ಹೀಗಾಗಿ ಅಭಿಮಾನಿ ಗಳು ಸಿಂಪಲ್ ಸ್ಟಾರ್ ಸಿನಿಮಾ ಬರುವಿಕೆಗಾಗಿ ಕಾತರದಿಂದ ಕಾಯುತ್ತಿದ್ದಾರೆ.

ಈ ನಡುವೆ ತಾವು ಅಮೆರಿಕಕ್ಕೆ ಹೋಗುವುದಾಗಿ ರಕ್ಷಿತ್ ಬಹಿರಂಗ ಪಡಿಸಿದ್ದಾರೆ. ತಮ್ಮ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರ ದ ಕೆಲಸಕ್ಕಾಗಿ ಅಮೆರಿಕಕ್ಕೆ ಹೋಗುವುದಾಗಿ ಕಾರಣ ನೀಡಿದ್ದಾರೆ.ಸ್ಕ್ರಿಪ್ಟ್‌ಗೆ ಫೈನಲ್ ಟಚ್ ನೀಡುವ ಹೊತ್ತಿಗೆ ಫೋನ್ ಕರೆಗಳು ಸೇರಿದಂತೆ ಯಾವುದೇ ಡಿಸ್ಟರ್ಬೆನ್ಸ್ ಇರಬಾರದು ಎಂಬ ಕಾರಣಕ್ಕೆ ಅಮೆರಿಕಾಗೆ ಹೋಗುತ್ತಿದ್ದೇನೆ ಎಂದು ಹೇಳಿದ್ದಾರೆ.

## ಭರವಸೆ ನೀಡಿದ ಐದು ಗ್ಯಾರಂಟಿ ಯೋಜನೆ ಜಾರಿ' – ಖರ್ಗೆ



ಸಿದ್ದರಾಮಯ್ಯ ಸಿಎಂ ಅಭ್ಯರ್ಥಿಯಾಗಿ ಘೋಷಣೆಯಾದ ಬೆನ್ನಲೇ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಟ್ವೀಟ್ ಮಾಡಿದ್ದು 6.5ಕೋಟಿ ಕನ್ನಡಿಗರಿಗೆ ಭರವಸೆ ನೀಡಿದ ಐದು ಗ್ಯಾರಂಟಿ ಜಾರಿಗೊಳಿಸುತ್ತೇವೆ ಎಂದಿದ್ದಾರೆ.

ಕರ್ನಾಟಕದ ಜನತೆಗೆ ಪ್ರಗತಿ, ಕಲ್ಯಾಣ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಲು ಟೀಂ ಕಾಂಗ್ರೆಸ್ ಬದ್ಧವಾಗಿದೆ. 6.5ಕೋಟಿ ಕನ್ನಡಿಗರಿಗೆ ಭರವಸೆ ನೀಡಿದ ಐದು ಗ್ಯಾರಂಟಿಗಳನ್ನು ನಾವು ಜಾರಿಗೊಳಿಸುತ್ತೇವೆ ಎಂದಿದ್ದಾರೆ. ಆ ಮೂಲಕ ಸಿದ್ದು, ಡಿಕೆಶಿ ಮತ್ತು ಖರ್ಗೆ ಏಕಕಾಲಕ್ಕೆ ಟ್ವೀಟ್ ಮಾಡುವ ಮೂಲಕ ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಇದೆ ಎನ್ನುವ ಸಂದೇಶ ರವಾನಿಸಿದ್ದಾರೆ.

ಇನ್ನು ಎಐಸಿಸಿ ಅಧ್ಯಕ್ಷ ಖರ್ಗೆ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಆಯ್ಕೆ ಮಾಡಿದ್ದು, ಮೇ 20 ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ.

## ಸೌರವ್ ಗಂಗೂಲಿಗೆ ಝೆಡ್ ಪ್ಲಸ್ ಭದ್ರತೆ ನೀಡಲು ಮುಂದಾದ 'ದೀದಿ' ಸರ್ಕಾರ



ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಹಾಗೂ ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರಿಗೆ ಸರ್ಕಾರದಿಂದ ನೀಡಲಾಗುತ್ತಿದ್ದ ವೈ ಕೆಟಗರಿ ಭದ್ರತೆಯನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ. ಗಂಗೂಲಿ ಅವರಿಗೆ ನೀಡಲಾಗಿದ್ದ ವೈ ಕೆಟಗರಿ ಭದ್ರತೆಯ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಝೆಡ್ ವರ್ಗಕ್ಕೆ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ ಎಂದು ಪಶ್ಚಿಮ ಬಂಗಾಳ ಸರ್ಕಾರ ನಿರ್ಧರಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೊಸ ಭದ್ರತಾ ವ್ಯವಸ್ಥೆ ಪ್ರಕಾರ, ಸೌರವ್ ಗಂಗೂಲಿಗೆ 8 ರಿಂದ 10 ಪೊಲೀಸ್ ಸಿಬ್ಬಂದಿಯ ಕಾವಲು ಇರಲಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಗಂಗೂಲಿ ಪ್ರಸ್ತುತ ತಮ್ಮ ತಂಡ ಡೆಲ್ಲಿ ಡೇರ್‌ಡೆವಿಲ್ಸ್‌ನೊಂದಿಗೆ ಪ್ರಯಾಣಿಸುತ್ತಿದ್ದಾರೆ ಮತ್ತು ಮೇ 21 ರಂದು ಕೋಲ್ಕತ್ತಾಗೆ ಹಿಂತಿರುಗುತ್ತಾರೆ. ಅವರು ಆ ದಿನದಿಂದ Z ವರ್ಗದ ಭದ್ರತೆಯನ್ನು ಪಡೆಯಲು ಪ್ರಾರಂಭಿಸುತ್ತಾರೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ರಾಜ್ಯಪಾಲ ಸಿ ವಿ ಆನಂದ ಬೋಸ್ ಮತ್ತು ತೃಣಮೂಲ ಕಾಂಗ್ರೆಸ್ ಸಂಸದ ಮತ್ತು ರಾಷ್ಟ್ರೀಯ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಝೆಡ್ ಪ್ಲಸ್ ಭದ್ರತೆ ಮತ್ತು ಫಿರ್ಹಾದ್ ಹಕೀಮ್ ಮತ್ತು ಮೊಲೋಯ್ ಘಾಟಕ್ ಅವರಂತಹ ಸಚಿವರಿಗೆ ಝೆಡ್ ವರ್ಗದ ಭದ್ರತೆಯನ್ನು ಒದಗಿಸಲಾಗಿದೆ.

## ಫಿಲ್ಮ್‌ಫೇರ್‌ನಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಗೆದ್ದ ಆಲಿಯಾ ಭಟ್

2023ನೇ ಸಾಲಿನ ಫಿಲ್ಮ್‌ಫೇರ್ ಅವಾರ್ಡ್ಸ್ ಕಾರ್ಯಕ್ರಮ ಏಪ್ರಿಲ್ 27ರಂದು ಅದ್ದೂರಿಯಾಗಿ ನೆರವೇರಿದ್ದು, ಆಲಿಯಾ ಭಟ್ ನಟನೆಯ 'ಗಂಗೂಬಾಯಿ ಕಾಠಿಯಾವಾಡಿ' ಸಿನಿಮಾ ಹಲವು ಪ್ರಶಸ್ತಿಗಳನ್ನು ಬಾಚಿಕೊಂಡಿದ್ದು, ಇದೇ ಸಿನಿಮಾಗೆ ಆಲಿಯಾ ಭಟ್ ಅವರು ಅತ್ಯುತ್ತಮ ನಟ ಅವಾರ್ಡ್ ಗೆದ್ದಿದ್ದಾರೆ.

ಈ ಕುರಿತು ತಮ್ಮ ಇನ್ಸ್ಟಾಗ್ರಾಮ್ ನಲ್ಲಿ ಸಂತಸವನ್ನು ಹಂಚಿಕೊಂಡಿರುವ ಅವರು ಅಭಿಮಾನಿಗಳಿಗೆ, ಕುಟುಂಬದವರಿಗೆ, ಸ್ನೇಹಿತರಿದರೆ ಧನ್ಯವಾದ ಅರ್ಪಿಸಿದ್ದಾರೆ.

# ನೇತ್ರಾವತಿ

1ನೇ ಪುಟದಿಂದ

ದುಂಬುದ ಕಾರ್ಯೊಗು ಯಿರಿಯೆರ್ ದುಂಬಾಯೆರ್. ನೇತ್ರ ದುಂಬುನಾನಿ ಜೆತ್ತಿನ ಪಜೆಟ್ಟೆ ಕನತ್‌ದ್ ಅಲ್ನ ಪುನನ್ ಜೆಪುಡಾಯೆರ್ ಮದಿಮೆದ ದಿನತಾನಿ ಮದಿಮಾಲಾಪಿನ ನೇತ್ರ ಉಸುಲುದಾಂತಿ ಜೂವೊಡು ಮದಿಮಾಲೆ ಐತೊಡು ಈ ಲೋಕದ ಕಡೇತ ಬಾಕಿಲ್ಡ್ ಎಕ್ಕಲೊಂದು ಪರಲೋಕೊಗು ಕಡಪುಡ್ದು ಕೊರ್ಯೆರೆ ಕಾತೊಂದಿತ್ತಲ್. ತರೆಕ್ ರಡ್ಡ್ ಅರಿ ದಕ್ಕೊಡೂಂದ್ ಅಂಗಲ್ಪುಡು ಬಾಲೆದಲ್ಕ ಸಾಂಕಿನ ಪಲಯೆ ದೇವೆರೆ ಗೊಬ್ಬುದ ನಡುಟು ತಂಗಡಿನ ಪುನೊಕು ಪುಗೆಲ್ ಕೊರ್ಯೆ. ವಾ ದಿನೊಗುಲ ಜಗ್ಗಂದ್‌ನ ರಾಜಗ್ ತಂಗಡಿನ ಪುನತ ದಿನ್ನ ತಾಂಗೆರಾವಂದೆ ಪಜ್ಜೆ ದುಂಬು ದೀಯೆರೆನೆ ಆಯಿಜಿ. ಪುನೊನು ಕಾಟೊಡು ಜೆಪುಡಾದ್ ಕಡೇತ ಒಂಜಿ ಬೊಟ್ಟು ನೀರ್ ಬುಡ್ದು ದುಂಬುದ ಕಾರ್ಯ ಮುಗಿತೆರ್. ಮಾತೆರ್ನಲ ತರೆಟ್ ಬೇತೆ ಬೇತೆ ಆಲೋಚನೆ ನೇತ್ರ ದಾಯೆ ಇಂಚ ಮಲ್ತಲ್ ಅಲೆಗ್ ರಾಜೆ ಒಯ್ಟಲ ಕಮ್ಮಿ ಮಲ್ತ್‌ನಾಯೆ ಅತ್ತ್. ತಾನ್ ಬಂಜಿ ಬಾಯಿ ಕಟ್ಟ್‌ಂಡಲ ತನ್ನತಂಗಡಿಯಲ್ಲೆನ್ ಬಂಗಾರ್‌ಲೆಕ ಸಾಂಕ್‌ದೆ. ಸೇರಿ ಸಾರೊ ಜನೊಕುಲೆ ಪ್ರಸ್ನೆಗ್ ಇತ್ತೆ ಉತ್ತರ ಕೊರ್ಪುನಕ್ ಲಾಂಡಲ ಏರ್....? ನೇತ್ರ ದಾದನಾ ದೆಂಗಾದ್ ದೀಯಲ ಪನ್ಪಿ ಇಸಯ ಮಾತೆರೆ ತರೆಟ್ ಪುರಿ ಪರತ್‌ಲೆಕ ಪರಪೆರೆ ಸುರುವಾಂಡ್. ನನದಾನೆ ನೇತ್ರ ದುಂಬುನಾನಿ ಜೆತ್ತಿನ ಪಜೆನ್ಲ ಅಲೆನೊಟ್ಟುಗು ಕಾಟೊಗೆ ಪಾಡ್ಲೆಂದ್ ತೆರಿನಕ್‌ಲೇರ ಪನ್ನಗ, ಪಜೆನ್ ಮಡ್ತ್ ದೆರ್ಪುಗಾಂದ್ ತೂನಗ ಅಡಿಟತ್ತಿ ಚೀಟ್ ಒಂಜಿ ಕತೆತ ಸತ್ಯೊನು ಪಂಡೊಂದು ಪೋಂಡು.....

ನೇತ್ರ ಪೇಂಟೆಡ್ ಕಲ್ತಿನ ಪೊಣ್ಣು.ರಾಜೆ ನೇತ್ರನ ಮೋಕೆದ ಪಲಯೆ. ಕಲ್ಪುನ ಬಾಲೆ ತೆರಿಯಂದೆ ಮೋಕೆದಂಚಿ ವಾಲ್ಯಲ್,ಪಲಯನ ಮೋಕೆದ ಎದುರು ಸತ್ಯೊನು ದೆಂಗಾದ್ ದೀಯಲ್.ಮದ್‌ರೆಂಗಿ ಒಂಜಿ ಮುಗಿಯಡ್ ಇಲ್ಲ್ ಪುಲ್ಯ ಆಪುನೆಕ್ ದುಂಬು ಮೋಕೆ ಮಲ್ತಿ ಆನನೊಟ್ಟುಗು ಊರು ಬುಡೊಡೂಂದ್ ಎನ್ನ್‌ದಿತ್ತಿ ನೇತ್ರಗ್ ಪಲಯೆ ಮಲ್ತಿ ಮದ್ಮೆದ ಅಟ್ಟನೆ ತೂದು ತಪ್ಪು ಮಲ್ತೆನಾಂದ್ ಇಲ್ಲ್ ಪೂರ ನಿದ್ರೆದಾಂತೆ ಪೋಂಡು.ಒಯ್ಕ್ ಬುಡ್ಪುನಿ ಒಯ್ಕ್ ಪತೊನ್ನಿ ಪನ್ಪುನ ಅಂದಾಜಾವಂದೆ ,ಪಲಯನ ಮೋಕೆದ ಅರ್ಕಟ್‌ದ ಎದುರು ಕುಸ್ಕುದು ಪೋಯಲ್. ಮೋಕೆ ಒರ್ಯಗ್ ಜೂವ ಒರ್ಯಗ್ ಎಂಚ ಕೊರಡ್ ಪಂಡ್ದ್ ಆಲೋಚನೆ ಮಲ್ತ್‌ನಲೆಗ್ ಮಂಡೆದುಲಯಿ ಗೆಂಡಬೂರಿನನೆ ಬೇನೆ. ಏರೆಗ್ಲ ಬೇನೆ ದಾಯೆ ಪಂಡ್ದ್ ಅಮಸರೊದ ಬುದ್ದಿಗ್ ತನ್ನ ಉಸುಲ್ನೆ ದಂಗಾದ್ ಕೊರ್ಯಲ್...

ಚೀಟ್‌ಡಿತ್ತಿ ಸತ್ಯ ಪಾತೆರೊಂದು ಪೋನಗ ಮಾತೆರೆ ಕಣ್ಣ್‌ಡ್ಲ ಕಣನೀರ ಎರ್ತೆ ನೇತ್ರನ ಕಾಟದ ಸೂತೊಟ್ಟುಗು ಬಾನೊದೆತ್ತರೊಗು ಏರ್ಯೆರೆ ಸುರುವಾಂಡ್. ಪಲಯನ ಮೋಕೆದ ಅರ್ಕಟ್‌ಗ್ ಬೂರಿನ ತಂಗಡಿ ತನ್ನ ಮೋಕೆನ್ ದೆಂಗಾದ್ ದೀದ್ ಬರಂದಿ ಜಾಗೆದಂಚಿ ಮೋನೆ ಪಾಡ್ಯಲ್.ಜೂವೊಗು ಜೂವ ಆದಿತ್ತಿ ತಂಗಡಿನ್ ಮದಪೆರಾವಂದೆ ರಾಜೆ ಅಲೆನೆಂಪುಡೆ ಆಯನ ಗೇನೊನು ಕಲೆವೊಂಡೆ.

ನೇತ್ರನ ನೆಂಪು ರಾಜನ್ ನನಲಾ ಬುಡ್ದು ಪೋವೊಂದಿಜ್ಜಿ.....ತಂಗಡಿ ನೇತ್ರಾವತಿ ಆಯನ ಮೋಕೆದ ಜೋಕೆದ ಸೊರೊಟು ಏಪಲ ನೇತ್ರ ಆದ್ ಮೆನ್ಕೊಂತಲ್, ನನ ಆಲ್ ನೆಂಪು ಆತೆ. ಏರ್ ದಾದನೆ ಪನಡ್ ಆಯೆ ಇನಿಕ್ಲ ನೇತ್ರಡ ಪಾತೆರೊಂದುಲ್ಲೆ ಗೇನೊದಾಂತಿನ ಬಾಲೆ ಆದ್...ನೇತ್ರ ಮಾತ್ರ ಬೊನ್ಯ ಆದ್ ನೇತ್ರಾವತಿತ ತುದೆನೀರ್ಡ್ ಪರತ್ ಕಡಲ್ ಸೇರ್ದಲ್..ಪಿ



ಚೇತನ್ ವರ್ಕಾಡಿ
ತುಲುವೆರೆ ಕಲ ಕುಡ್ಲ

## ಸಮಾಜವು ಒಗ್ಗಟ್ಟಿನ ಮೂಲಕ ಮುನ್ನಡೆಯಬೇಕು ತೋಕೂರಿನಂತ ಕ್ಷೇತ್ರಗಳು ಆಸರೆಯಾಗಬೇಕು – ಪೊಳಲಿ ತಪೋವನದ ರಾಮಕೃಷ್ಣ ಮಠದ ವಿವೇಕ ಚೈತನ್ಯಾನಂದ ಸ್ವಾಮೀಜಿ

ಕಿನ್ನಿಗೋಳಿ : ಧಾರ್ಮಿಕ ಕ್ಷೇತ್ರವನ್ನು ಕೇವಲ ದೇವರ ಸೇವೆಗೆಂದು ಮೀಸಲಿಡಬೇಡಿ, ಶಿಕ್ಷಣಕ್ಕೆ, ಸಾಮಾಜಿಕ ಚಟುವಟಿಕೆ ಸಹಿತ ಸಾಂಸ್ಕೃತಿಕ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಮೂಲಕ ಕ್ಷೇತ್ರ ವಿಸ್ತರಿಸಬೇಕು, ಹಿಂದು ಸಮಾಜವು ಧಾರ್ಮಿ ಕತೆಯ ಬಗ್ಗೆ ಸ್ವಾಮಿ ವಿವೇಕಾನಂದರು ಅಂದೇ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದರು, ಸಮಾಜವು ಒಗ್ಗಟ್ಟಿನ ಮೂಲಕ ಮುನ್ನಡೆಯಬೇಕು ತೋಕೂರಿನಂತ ಕ್ಷೇತ್ರಗಳು ಆಸರೆಯಾಗಬೇಕು ಎಂದು ಪೊಳಲಿ ತಪೋವನದ ರಾಮಕೃಷ್ಣ ಮಠದ ವಿವೇಕ ಚೈತನ್ಯಾನಂದ ಸ್ವಾಮೀಜಿ ಹೇಳಿದರು.




ಅವರು ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಪುನಃಪ್ರತಿಷ್ಠೆ ಬ್ರಹ್ಮಕುಂಭಾಷೇಕ ಮತ್ತು ನಾಗಮಂಡಲೋತ್ಸವದ ಪ್ರಯುಕ್ತ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಅನುಗ್ರಹ ಸಂದೇಶವನ್ನು ನೀಡಿದರು.

ಹೊಸದಿಗಂತ ಪತ್ರಿಕೆಯ ಸಂಪಾದಕ ಪಿ.ಎಸ್.ಪ್ರಕಾಶ್ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ದೇವರ ಸಾಂಗತ್ಯವನ್ನು ಪ್ರಾಣಿ, ಪಕ್ಷಿಗಳಲ್ಲಿ ಕಾಣುವ ಮಾನವನ ಜೀವನದಲ್ಲಿ ಪ್ರಕೃತಿಯನ್ನು ಆರಾಧಿಸುವ ಗುಣಗಳಿಂದಲೇ ಸನಾತನ ಸಂಸ್ಕೃತಿ ಉಳಿಸುವಂತಾಗಿದೆ. ಭಾರತವು ಆಧ್ಯಾತ್ಮಿಕ ಕೇಂದ್ರವಾಗಲು ಪ್ರತೀ ಗ್ರಾಮದಲ್ಲಿನ ಧಾರ್ಮಿಕ ಕ್ಷೇತ್ರಗಳೇ ಪರೋಕ್ಷ ಕಾರಣವಾಗಿದೆ ಎಂದರು.

ಧಾರ್ಮಿಕ ಚಿಂತಕ ಶ್ರೀಕಾಂತ್ ಶೆಟ್ಟಿ ಅವರು ದೇವಸ್ಥಾನ ಮತ್ತು ಸಮಾಜದ ಬಗ್ಗೆ ಧಾರ್ಮಿಕ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ದೇವ ಳಕ್ಕೆ ವಿಶೇಷವಾಗಿ ಸಹಕರಿಸಿದ ಗಾಯತ್ರಿ ರಾಘವೇಂದ್ರ ದೇವಾಡಿಗ ಅವರನ್ನು ಗೌರವಿಸಲಾಯಿತು.

ಮುಂಬೈ ಬಂಟ್ಸ್ ಅಸೋಶಿಯೇಶನ್‌ನ ಸಾಂಸ್ಕೃತಿಕ ಅಧ್ಯಕ್ಷ ಸುರೇಶ್ ಶೆಟ್ಟಿ ಯೆಯ್ಯಾಡಿ, ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹರಿದಾಸ್ ಭಟ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಉಪಾಧ್ಯಕ್ಷ ಮೋಹನ್‌ದಾಸ್, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಮಣ್ಣ ದೇವಾಡಿಗ ಮುಂಬೈ, ಸಂಚಾಲಕ ಡಾ.ಸೋಂದಾ ಭಾಸ್ಕರ ಭಟ್, ಸಮಿತಿಯ ಕೆ.ಭುವನಾಭಿರಾಮ ಉಡುಪ, ಹರಿಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಸಂತೋಷ್‌ಕುಮಾರ್ ಹೆಗ್ಡೆ ಸ್ವಾಗತಿಸಿದರು, ಸತೀಶ್ ಭಟ್ ಪ್ರಸ್ತಾವನೆಗೈದರು, ಮಹೇಶ್ ಕಲ್ಲಾಪು ವಂದಿಸಿದರು, ಅಂಜನ್‌ಕುಮಾರ್ ಕಲ್ಲಾಪು ಕಾರ್ಯಕ್ರಮ ನಿರೂಪಿಸಿದರು.

ವಿವಿಧ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

**ಮಂಗಳೂರು: ನಿಟ್ಟೆ ವಿಶ್ವವಿದ್ಯಾನಿಲಯವು ಆಯೋಜಿಸಿದ್ದ ಹೆಲ್ತ್ ಕೇರ್ ಇನ್ನೋವೇಶನ್ ಹ್ಯಾಕಥಾನ್‌ನಲ್ಲಿ ಎಸ್‌ಜೆಇಸಿಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ.**

**ನಿಟ್ಟೆ ವಿಶ್ವವಿದ್ಯಾನಿಲಯವು 5–7 ಮೇ 2023 ರಂದು ನಡೆದ ನಿಟ್ಟೆ ತಂತ್ರಜ್ಞಾನ ಸಕ್ರಿಯಗೊಳಿಸುವ ಕೇಂದ್ರದ ಆಶ್ರಯದಲ್ಲಿ ಆಚೋಜಿ ಸಲಾದ ಹೆಲ್ತ್ ಕೇರ್ ಇನ್ನೋವೇಶನ್ ಹ್ಯಾಕಥಾನ್ ನಲ್ಲಿ ಮಂಗಳೂರಿನ ಸಂತ ಜೋಸೆಫ್ ಇಂಜಿನಿಯ ರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದಾರೆ.**

## ಆಳ್ವಾಸ್ ಕಾಲೇಜಿನಲ್ಲಿ ರಂಗಕರ್ಮಿ, ಪರಿಸರ ರಕ್ಷಣೆಯೇ ಸ್ವಯಂ ರಕ್ಷಣೆ – ಚಿತ್ರನಟ ಪ್ರಕಾಶ್ ಬೆಳವಾಡಿ

ವಿದ್ಯಾಗಿರಿ, ಮೂಡುಬಿದಿರೆ: 'ಮನುಷ್ಯನೂ ಪ್ರಕೃತಿ. ಪರಿಸರ ಸಂರಕ್ಷಣೆ ಎಂದರೆ, ಮನುಷ್ಯ ತನ್ನನ್ನು ತಾನು ಸಂರಕ್ಷಿಸಿಕೊಳ್ಳುವುದು' ಎಂದು ರಂಗಕರ್ಮಿ, ನಟ, ವಾಗ್ಮಿ ಪ್ರಕಾಶ್ ಬೆಳವಾಡಿ ವಿಶ್ಲೇಷಿಸಿದರು.



ಆಳ್ವಾಸ್ ಕಾಲೇಜಿನ ಮಾನವಿಕ ವಿಭಾಗದ ವತಿಯಿಂದ 'ಭಾರತೀಯ ಸಂಸ್ಕೃತಿ ಮತ್ತು ಪರಿಸರ' ಧ್ಯೇಯದೊಂದಿಗೆ ನಡೆದ 'ಆರ್ಟ್ಸ್ ಎಗ್ಸ್ಯುಬೆರೆನ್ಸ್ ರಿವಾಯತ್ 2023' ರಾಷ್ಟ್ರ ಮಟ್ಟದ ಅಂತರ ಕಾಲೇಜು ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಡು ಇದ್ದ ಕಾರಣ ಅರಣ್ಯ ಇಲಾಖೆ ಇದೆಯೇ ಹೊರತು, ಅರಣ್ಯ ಇಲಾಖೆ ಬೆಳೆಸಿದ ಕಾಡುಗಳಿಲ್ಲ. ಅರಣ್ಯದಲ್ಲಿ ಯಾವುದೂ ತ್ಯಾಜ್ಯವಲ್ಲ. ದೇಶದಲ್ಲಿ ಪ್ರಕೃತಿ ಸಂಪನ್ಮೂಲ ದೋಚುವವರಿಗೆ ಹೆಚ್ಚಿನ ಸುಂಕ ಅಥವಾ ದಂಡವೂ ಇಲ್ಲ ಎಂದರು.

ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್ ಮಾತನಾಡಿ, ನೀರನ್ನು ಮಿತವಾಗಿ ಬಳಸುವುದು, ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವುದು, ಮರುಬಳಕೆ ಮಾಡುವ ವಸ್ತುಗಳನ್ನೇ ಹೆಚ್ಚಾಗಿ ಉಪಯೋಗಿಸುವುದರಿಂದ ಪರಿಸರ ನಾಶವನ್ನು ತಡೆಗಟ್ಟಬಹುದು ಎಂದರು.

ಪೋಸ್ಟರ್ ಬಿಡುಗಡೆ ಮೂಲಕ ವಿದ್ಯಾರ್ಥಿಗಳೇ ತಯಾರಿಸಿದ ಬಿದಿರಿನ ಸ್ಟ್ರಾ–ಬಳಕೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಕಾಲೇಜಿನ ಆಡಳಿತಾಧಿಕಾರಿ ಪ್ರೊ. ಬಾಲಕೃಷ್ಣ ಶೆಟ್ಟಿ, ಮಾನವಿಕ ವಿಭಾಗದ ಮುಖ್ಯಸ್ಥೆ ಸಂಧ್ಯಾ ಕೆ. ಎಸ್, ವಿದ್ಯಾರ್ಥಿ ಸಂಯೋಜಕರಾದ ಅಮೃತಾ ಭಟ್ ಹಾಗೂ ಚಂದ್ರಶೇಖರ್ ಇದ್ದರು. ಲಕ್ಷ್ಮೀ ಮತ್ತು ಬಳಗದವರು ಪ್ರಾರ್ಥಿಸಿ, ಆಯನಾ ವಿ. ರಮಣ್ ಹಾಗೂ ಎ. ಎಸ್ ಶ್ರೇಯ ನಿರೂಪಿಸಿದರು.

Visit Our Webiste: www.pingara.com

## 52 ನೇ ಕೊಂಕಣಿ ಕವಿ ಸಂಗಮ – ಕೊಚ್ಚಿಯಲ್ಲಿ ನಡೆದ “ಶೋಭಾಕೃತ ವೈಶಾಖ”

ಕೊಂಕಣಿ ಕೇಂದ್ರ – ಗೋಶ್ರೀಪುರ ಮತ್ತು ಕೊಂಕಣಿ ಭಾಷಾ ಪ್ರಚಾರ ಸಭಾ ಜಂಟಿಯಾಗಿ 52 ನೇ ಕೊಂಕಣಿ ಕವಿ ಸಂಗಮ – "ಶೋಭಾಕೃತ ವೈಶಾಖ್" ಅನ್ನು ಏಪ್ರಿಲ್ 30, 2023 ರಂದು ಭಾನುವಾರ ಮಧ್ಯಾಹ್ನ 3.30 ಕ್ಕೆ ಕೊಚ್ಚಿಯ ಕೊಂಕಣಿ ಭಾಷಾ ಭವನದಲ್ಲಿ ಆಯೋಜಿಸಲಾಗಿದೆ.




ಪ್ರಾರ್ಥನೆಯ ನಂತರ ಎಸ್. ಚಿತ್ತರಂಜನ್ ನಾಯಕ್ ಎಲ್ಲ ಕವಿಗಳನ್ನು ಸ್ವಾಗತಿಸಿದರು. ಇತ್ತೀಚೆಗೆ ನಿಧನರಾದ ಕೊಂಕಣಿ ಸಾಹಿತಿಗಳಾದ ಸಂಜೀವ್ ವೆರೆಂಕರ್ ಮತ್ತು ಗಜಾನನ ಜೋಗ್ ಅವರಿಗೆ ಎರಡು ನಿಮಿಷಗಳ ಮೌನ ಪ್ರಾರ್ಥನೆ ಸಲ್ಲಿಸಲಾಯಿತು.

ನಂತರ ನಡೆದ ಕವಿಗೋಷ್ಠಿಯಲ್ಲಿ ಸರ್ವ ರವೀಂದ್ರನಾಥ ಹೆಗಡೆ (ಫುಲ್ಲಂ ಜತಾಯಿ, ರೂಪ ದೇವ), ಕೆ.ಎನ್.ಆರ್.ಭಟ್ (ಧಾನವಡಿ ರೆ ಧನವಡಿ), ಎನ್.ಸದಾನಂದ ಕಾಮತ್ (ಅಬು), ಧನ್ಯ ಜಿ.ಮಲ್ಲಿಯಾ (ರೂಕು), ಆರ್.ರಮಾನಂದ ಪ್ರಭು (ಜೋಳಿಯೇ ಗೀಂತು, ಪಾವಸಾಂತು ಮನ್ ತಿಂಬಲೆನ್), ವಿಜಯಕುಮಾರ್ ಎನ್.ಪೈ (ಜಿಖಿಕಾ ಮಕಾ), ಸುಧೀಶ್ ಎಸ್. ಶೆಣೈ (ಅಂಬೋ ಆನಿ ಪ್ಯಾರಿ), ಸುರೇಶ್ ವಿ. ಶೆಣೈ (ರಾಕ್ಷಕು ತುನ್ ಉದ್ಯಾನೇಶ್ವರ), ಶ್ರೀಕರ್ ಬಿ. ಭಟ್ (ಗೋಶ್ರೀಪುರೇಶ್ ಭಜನ್), ಎನ್. ಮಾಧವ್ ರಾವ್ (ಸತ್ಸಂಗಚೆಂ ಫಳ್ ), ಗೋವಿಂದ್ ಎಸ್.ನಾಯಕ್ (ಫುಲ್ಲಾ ಬ್ಯಾರೆಲಿ), ಆರ್.ಎಸ್. ಭಾಸ್ಕರ್ (ಆಷಾಢಾಚೊ ಪಯ್ಲೊ ಪಾವಸ್), ಎನ್. ಬಾಲಕೃಷ್ಣ ಮಲ್ಯ (ಪಟ್ಟಲ್ಯೆಮ್ಮುಲಿಂ ಬಾವಲಿಂ, ಅನಿಕ್ ಸೂರ್ಯ ಉದೆವ್ನಾ), ವಸಂತಕುಮಾರಿ ಪಿ.ಎಸ್ (ರನ್ನಂತುಲೊ ಗೀಂತು, ಅಜ್ಜಿ), ಕಾಂಚನಾ ಬೋಸ್ (ಸಂಖ್ಯಾ ಗೀತೆ, ಕೃಷ್ಣ ಕೃಷ್ಣ ದಾವ್ನು ಯೋ ರೆ), ಜಿ. ಮೋಹನ್ ರಾವ್ (ದೋವು) ಗೋಸ್ರಿಪುರಂ ಹರಿಕುಮಾರ್ (ತೂಂಚಿ ರಾಕ್ ದೇವಾ) ತಮ್ಮದೇ ಆದ ಕವನಗಳನ್ನು ಪ್ರಸ್ತುತಪಡಿಸಿದರು.

ಬಳಿಕ ಓದಿದ ಕವಿತೆಗಳ ಕುರಿತು ಚರ್ಚೆ ನಡೆಯಿತು. ಪ್ರಾರ್ಥನೆಯ ನಂತರ ಸಭೆ ಮುಕ್ತಾಯವಾಯಿತು.

ಸಭೆಯಲ್ಲಿ, ಕೊಚ್ಚಿಯ ಪ್ರಮುಖ ಅಂಕಣಕಾರರು, ಇತಿಹಾಸಕಾರರು ಮತ್ತು ಅನುವಾದಕಿ ಡಾ. ಪ್ರತಿಮಾ ಆಶರ್ ಅವರು ಉಪಸ್ಥಿತರಿದ್ದರು.

## 20 ಲಕ್ಷ ಬೇಡಿಕೆಯನ್ನಿಟ್ಟು ಯುವತಿಯನ್ನು ಅಪಹರಿಸಿದ ದುಷ್ಕರ್ಮಿಗಳು

ಶಿವಮೊಗ್ಗ: ಜಯನಗರ ಪೊಲೀಸ್ ಠಾಣೆಯಲ್ಲಿ 20 ಲಕ್ಷ ಬೇಡಿಕೆಯ ಮೇಲೆ ಹಣಕ್ಕಾಗಿ ಯುವತಿಯೊಬ್ಬಳನ್ನು ಅಪಹರಣ ಮಾಡಿರುವ ಘಟನೆ ನಡೆದಿದೆ.



ರಂಜಿತಾ (22) ಎಂಬ ಯುವತಿಯು ಮೇ 14 ರಂದು ಸಂಜೆ 5 ಗಂಟೆಯಿಂದ ರಾತ್ರಿ 9.30ರ ಅವಧಿಯಲ್ಲಿ ಹಣಕ್ಕಾಗಿ ದುಷ್ಕರ್ಮಿಗಳು ಅಪಹರಣ ಮಾಡಿದ್ದಾರೆ ಎಂದು ವರದಿಯಾಗಿದೆ. ದುಷ್ಕರ್ಮಿಗಳು ರಂಜಿತಾಳ ಮೊಬೈಲ್ನಿಂದಲೇ ಮನೆಯವರಿಗೆ ಕರೆ ಮಾಡಿ ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ. ರಂಜಿತಾ ಶಿವಮೊಗ್ಗದಲ್ಲಿ ಉನ್ನತ ಶಿಕ್ಷಣ ಓದುತ್ತಿದ್ದಾರೆ ಎಂದು ಹೇಳಲಾಗಿದೆ.

**ಮಂಗಳೂರು: ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಪರಮ ಪೂಜ್ಯ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ನಗರದ ಕಾರ್ ಸ್ಟ್ರೀಟ್‌ನ ಶ್ರೀ ಗೋಕರ್ಣ ಮಠದಲ್ಲಿ ಮೊಕ್ಕಾಂ ಹೂಡಿರುವ ಹಿನ್ನೆಲೆಯಲ್ಲಿ ಮಠದ ಸಭಾಂಗಣದಲ್ಲಿ ವಿದುಷಿ ವಿಭಾ ಶ್ರೀನಿವಾಸ್ ನಾಯಕ್ ಹಾಗೂ ತಂಡದವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ಮೇ 15 ರಂದು ಸೋಮವಾರ ಸಂಜೆ 6 ಗಂಟೆಯಿಂದ 8 ಗಂಟೆಯವರೆಗೆ ನಡೆಯಿತು. ತಬಲಾದಲ್ಲಿ ಮೂಡಬಿದ್ರೆಯ ವಿಘ್ನೇಶ್ ಪ್ರಭು ,ಹಾರ್ಮೋನಿಯಂ ನಲ್ಲಿ ಮಂಗಳೂರಿನ ಹೇಮಂತ್ ಭಾಗವತ್ ಹಾಗೂ ದಾಮೋದರ್ ಭಾಗವತ್ ತಾಳದಲ್ಲಿ ಸಾಥ್ ನೀಡಿದರು.**

## ಸುಗಮ ಸಂಚಾರಕ್ಕೆ ಮಂಗಳೂರು ನಗರದಲ್ಲಿ 'ಕೋಬ್ರಾ'

ಮಂಗಳೂರು: ನಗರದ ರಸ್ತೆಗಳಲ್ಲಿ, ವಾಹನ ಸಂಚಾರದ ಒತ್ತಡ ಅತೀ ಹೆಚ್ಚಾಗಿದ್ದು, ಇತ್ತೀಚಿನ ದಿನಗಳಲಂತೂ ಸಂಚಾರ ಪೊಲೀಸರಿಗೆ ಸಂಚಾರ ನಿರ್ವಹಣೆ ಒಂದು ಸವಾಲಾಗಿ ಪರಿಣಮಿಸಿದೆ. ನಗರದಲ್ಲಿ ಸುಗಮ ಸಂಚಾರವನ್ನು ಜಾರಿ ಮಾಡಲು ಎಷ್ಟೇ ಆಧುನಿಕ ತಂತ್ರಜ್ಞಾನಗಳನ್ನು ಬಳಸಿದರೂ ಸಹ ಸಂಚಾರ ಪೊಲೀಸರ ಇರುವಿಕೆಯು ಅನಿವಾರ್ಯವಾಗಿರುತ್ತದೆ.




ಕೆಲವು ಸಂದರ್ಭಗಳಲ್ಲಿ ಸಣ್ಣ ಪುಟ್ಟ ಅಪಘಾತ ಸಂಭವಿಸಿ ವಾಹನ ಸವಾರರುಗಳು ಜಗಳವಾಡಿಕೊಂಡ ಸಂದರ್ಭದಲ್ಲಿ ವಾಹನಗಳನ್ನು ರಸ್ತೆಯ ಮಧ್ಯದಲ್ಲಿಯೇ ನಿಲ್ಲಿಸಿ ಸುಗಮ ಸಂಚಾರಕ್ಕೆ ಅಡಚಣೆಯನ್ನುಂಟು ಮಾಡುತ್ತಾರೆ ಹಾಗೂ ಇಂತಹ ಇತರೆ ಹಲವಾರು ಸಮಯಗಳಲ್ಲಿ ಆ ಸ್ಥಳಕ್ಕೆ ತುರ್ತಾಗಿ ಹೋಗಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ಸಹಕಾರಿ ಯಾಗುವಂತೆ ಮಂಗ ಳೂರು ನಗರದಲಿ, ನಾಲ್ಕು 'ಕೋಬ್ರಾ' ದ್ವಿಚಕ್ರ ವಾಹನಗಳ ನ್ನು 16 ಮೇ, 2023 ರಂದು ಸಂಚಾರ ಪೂರ್ವ ಪೊಲೀಸ್ ಠಾಣೆ ಮತ್ತು, ಸಂಚಾರ ಪಶ್ಚಿಮ ಪೊಲೀಸ್ ಠಾಣೆಗೆ ಹಸ್ತಾಂತರಿಸಲಾಗಿದೆ.




ಸದ್ರಿ 'ಕೋಬ್ರಾ' ದ್ವಿಚಕ್ರ ವಾಹನಗಳನ್ನು ಠಾಣಾ ಸರಹದ್ದಿನಲ್ಲಿ ಉಪಯೋಗಿಸಿಕೊಂಡು ಸಂಚಾರ ಸುವ್ಯವಸ್ಥೆ ಮತ್ತು ರಸ್ತೆ ಅಪಘಾತಗಳನ್ನು ತಡೆಗಟ್ಟಲು ಹಾಗೂ ನೊಂದವರಿಗೆ ಸಹಕರಿಸಲು ಕ್ರಮ ಕೈಗೊಳ್ಳಲಾಗುವುದು,

## ಅಮ್ಮ

ಕಣ್ಣಿಗೆ ಕಾಣುವ ದೇವರೆಂದರೆ ಅದು ಅಮ್ಮ ಅವಳಿಲ್ಲದ ಪ್ರಪಂಚವಿಲ್ಲ ಮನೆಯ ಸದಸ್ಯರನ್ನ ಒಟ್ಟಾಗಿ ಜೋಡಿಸಿಟ್ಟ ಕೊಂಡಿ ಎಲ್ಲರನ್ನು ನಿಷ್ಕಲ್ಮಶವಾಗಿ ಪ್ರೀತಿಸುವಳು ಅದಕ್ಕೆ ಹೇಳುವು ಅವಳೊಂದು ಪ್ರೀತಿಯ ಶಿಖರತ್ಯಾಗದ ಆಗರ ಮಮತೆಯ ಸಾಗರ.



ಅವಳ ಪ್ರೀತಿ ನೆನೆಯಲು ಒಂದು ದಿನ ಸಾಕೇ...?ಉಸಿರಿಗೆ ಹೆಸರು ನೀಡಿದವಳು.

ನನ್ನ ಪ್ರತಿ ಬರಹಗಳ ಮೊದಲ ಓದುಗಳು ಅವಳುನನ್ನ ಪ್ರತಿ ಶಬ್ಧದ ಸ್ವಾರಸ್ಯಕರ ಅರ್ಥ ಅವಳುಜಗತ್ತು ವಿಶಾಲವಾಗಿದ್ದರೂ ಅವಳ ಮಡಿಲೆ ನನಗೆ ನೆಮ್ಮದಿಯ ತಾಣ...

ನನ್ನ ನಗುವಿನ್ನಲ್ಲೆ ತನ್ನ ದುಃಖ ಮರೆತವಳು

ನನ್ನ ಸಂತಸಕೆ ಸಂಭ್ರಮಿಸಿದವಳು

ಏನೆಂದು ವರ್ಣಿಸಲಿ ನಿನ್ನ ಪದಗಳಿಲ್ಲ ಈ ದಿನ ಉಸಿರು ನೀಡಿದ ದೇವತೆಯನ್ನಲಾ ಸದಾ ನನ್ನ ಹಾರೈಸುವ ಜೀವ ನನ್ನ ಬದುಕಿನ ಸಂಜೀವಿನಿ ಅಮ್ಮನೆಂಬ ಅಮೃತ...

ಭೂಮಿಗೆ ನನ್ನ ತಂದವಳಿಗೆ ಭೂಮಿಯಷ್ಟೆ ಸಹನಾ ಶಕ್ತಿ...ಮಗುವಿನ ಮನಸ್ಸು, ಬದುಕಿನಲ್ಲಿ ನಾವು ಅವರಿವರ ಕತೆಗಳಿಂದ ಕಲೆಯುವುದಕ್ಕಿಂತ ಒಮ್ಮೆ ಅಮ್ಮನ ಕತೆ ಕೇಳಿ ಬಿಡಿ ಸಾಕಷ್ಟು ಕಲಿಯಬಹುದು ತಿಳಿಯಬಹುದು...

ಒಬ್ಬ ತಾಯಿಗಿಂತ ಸ್ಪೂರ್ತಿ ಮತ್ಯಾರಿರಲು ಸಾಧ್ಯ...

ಕಷ್ಟನೊ ಸುಖನೊ ಪ್ರತಿ ಹೆಜ್ಜೆಯಲ್ಲಿ ಬದುಕಿನ ಏರಿಳಿತಗಳನ್ನ ದಾಟಿ ...ಹೇಳದೆ ತಿಳಿಯುವ ಕೌಶಲ್ಯತೆ ಅವಳಲ್ಲಿದೆ...ತನ್ನ ಕೈಲಾದಷ್ಟು ಸಹಾಯ ಮಾಡುವ ಗುಣ ಇದೆ ಅದಕ್ಕೆ ಜನ ಅವರೆಲ್ಲಿದ್ದರು ಬಂದು ಭೇಟಿಯಾಗಿ ಒಳ್ಳೆ ಮಾತಾಡಿ ಹೋಗತಾರೆ.

ಅಮ್ಮನಿಗೆ ಬಹುದಿನಗಳ ನಂತರ ಒಬ್ಬರೂ ಭೇಟಿಯಾದಾಗಿದ್ರೂ ನನಗೆ ಪರಿಚಯ ಇರಲಿಲ್ಲ.

ನಿಮ್ಮಮ್ಮ ಅಪ್ಪಟ ಚಿನ್ನನಮ್ಮ ಅವಳ ಅನ್ನ ತಿಂದು ಬೆಳೆದವರ ನಾವು ಮರೆಯಲಾಗದ ವ್ಯಕ್ತಿ ಅಂತ ಅದೆಷ್ಟು ಸಂತಸದಿಂದ ಹೇಳತಿದ್ದರಂದ್ರೆ ಅವರ ಕಣ್ಣಂಚು ಒದ್ದೆಯಾಗಿತ್ತು.

ನೀ ನಿನ್ನಮ್ಮನ ಅಚ್ಚು ಹಾಗೇ ಇದ್ದಿಯ ಅಂತ ಹೇಳದಾಗ...ನನ್ನ ಮೊಗದಲ್ಲಿ ಮುಗುಳ್ನಗುವಿನ ಜೊತೆ ಹೆಮ್ಮೆ ಕೂಡ...ನಾ ನನ್ನಮ್ಮ ತರಹ ಎಂದರೆ ನನಗೆ ಸಂತೋಷದ ಜೊತೆ ಹೆಮ್ಮೆನು ಆಗುತ್ತೆ ಯಾಕೆಂದರೆ ಅವಳೆಂದರೆ ವಿಶಿಷ್ಟ ಅವಳಂತೆ ಯಾರು ಇಲ್ಲ ಅವಳ ಗುಣದಂತೆ ಒಂಚೂರಾದರೂ ನಾನಾದರೆ ಅದಕ್ಕಿಂತ ಸಾರ್ಥಕತೆ ಉಂಟಾ...?



ಅಂಜಲಿ ಶ್ರೀನಿವಾಸ

ಅಮ್ಮಂದಿರ ದಿನದ ಶುಭಾಶಯಗಳು ಅಮ್ಮ

ಐ ಲವ್ ಯೂ ಅಮ್ಮ...

## ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಪುನಃಪ್ರತಿಷ್ಠೆ ಬ್ರಹ್ಮಕುಂಭಾಷೇಕ ಮತ್ತು ನಾಗಮಂಡಲೋತ್ಸವ ಪ್ರಯುಕ್ತ ಧ್ವಜಾರೋಹಣ



ಕಿನ್ನಿಗೋಳಿ: ಕಿನ್ನಿಗೋಳಿ ಸಮೀಪದ ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಪುನಃಪ್ರತಿಷ್ಠೆ ಬ್ರಹ್ಮಕುಂಭಾಷೇಕ ಮತ್ತು ನಾಗಮಂಡಲೋತ್ಸವದ ಪ್ರಯುಕ್ತ ದೇವಳದ ನೂತನ ಧ್ವಜಸ್ತಂಭ'ದಲ್ಲಿ ಧ್ವಜಾರೋಹಣ ನಡೆದು, ಶ್ರೀ ನಾಗದೇವರ ಬಿಂಬ ಪ್ರತಿಷ್ಠೆ, ಕಲಶಾಭಿಷೇಕ ನಡೆದು, ವಿವಿಧ ಹೋಮಗಳೊಂದಿಗೆ ಶ್ರೀ ಕಾಂತೇರಿ ಧೂಮಾವತಿ ದೈವಪ್ರತಿಷ್ಠೆ ಕಲಶಾಭಿಷೇಕ ಜರಗಿತು. ಶ್ರೀ ಮಹಾಗಣಪತಿ ಹಾಗೂ ಶ್ರೀ ದುರ್ಗಾದೇವಿಗೆ ಕಲಶಾಧಿವಾಸ, ಉತ್ಸವಬಲಿ, ಮಹಾಪೂಜೆ ನಡೆದು ಪ್ರಸಾದ ವಿತರಣೆ ನಡೆಯಿತು. ಶಿಬರೂರು ಗೋಪಾಲಕೃಷ್ಣ ತಂತ್ರಿ ಅವರ ನೇತೃತ್ವದಲ್ಲಿ ನಡೆದ ಧಾರ್ಮಿಕ ವಿಧಿ ವಿಧಾನಗಳು ನಡೆಯಿತು. ಅರ್ಚಕ ಮಧುಸೂಧನ ಆಚಾರ್ಯ ಅವರು ಸಹಕರಿಸಿದರು.

ಬೆಳಿಗ್ಗೆ ಹಾಗೂ ಮಧ್ಯಾಹ್ನ ಸುಮಾರು 10 ಸಾವಿರ ಮಂದಿಗೆ ಉಪಹಾರ ಮತ್ತು ಅನ್ನಪ್ರಸಾದವನ್ನು ವಿತರಿಸಲಾಯಿತು. ವಿವಿಧ ಸ್ವಯಂ ಸೇವಕರು ಈ ವ್ಯವಸ್ಥೆಯಲ್ಲಿ ತಮ್ಮ ಸೇವಾ ಮನೋಭಾವನೆಯೊಂದಿಗೆ ತೊಡಗಿಸಿಕೊಂಡರು. ಸಾಂಸ್ಕೃತಿಕ ಕಾರ್ಯಕ್ರಮವು ಸ್ವಂದ ಮಂಟಪದಲ್ಲಿ ವಿವಿಧ ಸಂಘ ಸಂಸ್ಥೆಗಳು ಪ್ರಾಯೋಜಿಸಿದ ಕಾರ್ಯಕ್ರಮಗಳು ಪ್ರದರ್ಶನಗೊಂಡಿತು. ಜಾತ್ರಾ ಸಂಭ್ರಮದ ವಾತಾವರಣದಲ್ಲಿ ಮಕ್ಕಳಿಗೆ ಹಾಗೂ ಬಂದಂತಹ ಭಕ್ತರಿಗೆ ವಿವಿಧ ಮನೋರಂಜನಾ ಆಟಗಳ ಮೈದಾನಕ್ಕೆ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಸಂತೋಷ್ ಕುಮಾರ್ ಹೆಗ್ಡೆ ಅವರು ಚಾಲನೆ ನೀಡಿದರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಧರ್ಮದರ್ಶಿ ಹರಿಕೃಷ್ಣ ಪುನರೂರು, ಉಪಾಧ್ಯಕ್ಷ ಮೋಹನ್‌ದಾಸ್, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹರಿದಾಸ್ ಭಟ್, ಸದಸ್ಯರಾದ ವಿಜಯಕುಮಾರ್ ರೈ, ಟಿ.ಪುರುಷೋತ್ತಮ ರಾವ್, ಲೋಕಯ್ಯ ಕೆ. ಸಾಲ್ಯಾನ್, ವಿಪುಲ ಡಿ. ಶೆಟ್ಟಿಗಾರ್, ಶಾರದಾ ಜಿ. ಬಂಗೇರ, ವಿಶ್ವನಾಥ್, ಯೋಗೀಶ್ ಆರ್. ಕೋಟ್ಯಾನ್, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಮಣ್ಣ ದೇವಾಡಿಗ, ಅನಂತರಾಮ ಶಿಮಂತ್ರಾಯ, ಆರ್.ಎನ್.ಶೆಟ್ಟಿಗಾರ್, ಗಂಗಾಧರ ಶೆಟ್ಟಿ, ಗುರುರಾಜ್ ಎಸ್. ಪೂಜಾರಿ, ದೇವಿದಾಸ ಶೆಟ್ಟಿ ಕಿನ್ನಿಗೋಳಿ, ರತ್ನಾಕರ ಶೆಟ್ಟಿಗಾರ್, ಸಂಪತ್ ದೇವಾಡಿಗ, ಧನಂಜಯ ಶೆಟ್ಟಿಗಾರ್, ಸಂತೋಷ್‌ಕುಮಾರ್, ದಿನಕರ್ ಸಾಲ್ಯಾನ್, ಹಿಮಕರ್, ನವೀನ್ ಶೆಟ್ಟಿಗಾರ್, ಸಂತೋಷ್ ದೇವಾಡಿಗ, ನಾರಾಯಣ ಸುವರ್ಣ, ಧರ್ಮಾನಂದ ಶೆಟ್ಟಿಗಾರ್, ಗಣೇಶ್ ದೇವಾಡಿಗ, ವರುಣ್ ಅಂಚನ್ ಮತ್ತಿತರರು ಉಪಸ್ಥಿತರಿದ್ದರು.

## ಗಂಟೆ ಹೂವು ಮತ್ತು ಡ್ಯಾಫೊಡಿಲ್ಸ್

ನಾನು ಸಣ್ಣವನಿದ್ದಾಗ ಎಲ್ಲಿಗಾದರೂ ಹೋಗುವಾಗ ನೇಜಾರಿನಿಂದ ತೆಂಕ ನಿಡಿಯೂರು ಕಡೆಗೆ ನಡೆಯುವಾಗ ಅಲ್ಲಿ ಬಂಗಾರದ ಬಣ್ಣದ ಗಂಟೆ ಹೂಗಳ ಪೊದರುಗಳಿದ್ದವು. ಅಲ್ಲಿ ಗುಡ್ಡದ ಗುರುತೇ ಸಿಗದಷ್ಟು ಮನೆಗಳು ಈಗ ಇವೆ.

ಆ ಗಂಟೆ ಹೂಗಳನ್ನು ಕಂಡಾಗ ನನ್ನನ್ನು ಎಂಟನೆಯ ತರಗತಿಯಲ್ಲಿನ ವಿಲಿಯಂ ವರ್ಡ್ಸ್‌ವರ್ತ್‌ರ ಡ್ಯಾಫೊಡಿಲ್ಸ್ ಕವಿತೆಯು ಕಾಡುತ್ತಿತ್ತು. ಬಂಗಾರದ ಬಣ್ಣದ ಹಳದಿ ಗಂಟೆ ಹೂವಿನ ಜೊತೆಗೆ ಸಮೀಕರಿಸುತ್ತಿದ್ದವು.

ಆದರೆ ಡ್ಯಾಫೊಡಿಲ್‌ಗಳು ಬಲ್ಬ್ {ಈರುಳ್ಳಿ ಮಾದರಿಯ ಗಡ್ಡೆ} ಬಿಡುವವು. ಯೂರೋಪಿನಲ್ಲಿ ಅದರ ತುತ್ತೂರಿ ಮಾದರಿಯ ಹೂವಿಗಾಗಿ ವ್ಯಾಪಕವಾಗಿ ಬೆಳೆಸುತ್ತಾರೆ.

ಆದರೆ ಗಂಟೆ ಹೂವು ಹಾಗಲ್ಲ, ಅದು ಗುಡ್ಡೆ ಹೂವು ಈಗ ಮನೆ ಬೇಲಿಗೆ, ಉದ್ಯಾನಗಳಿಗೆ ಬಂದಿದೆ ಅಷ್ಟೆ.

ಗಂಟೆ ಹೂವಿನಲ್ಲಿ ಮರದ ಜಾತಿಯವು ಇವೆ ಹಾಗೂ ಬೇರೆ ಬಣ್ಣದವು ಕೂಡ ಇವೆ.

ಬಿಗ್ನೋನಿಯೇಸೀ ಕುಟುಂಬದ ಗಂಟೆ ಹೂವನ್ನು ಸ್ಟಾನ್ಸ್ ಯೆಲ್ಲೋ ಎಂದು ಕೂಡ ಕರೆಯುತ್ತಾರೆ. ಟ್ರಂಪ್‌ಡ್ ಬುಶ್ ಪೊದೆಗಳಲ್ಲದೆ ಟೆಕೋಮ ಮರಗಳೂ ಇವೆ.

ಮಧ್ಯ ಅಮೆರಿಕದಲ್ಲಿ ಗಂಟೆ ಹೂವು ಪೊದೆಗಳು ವ್ಯಾಪಕವಾಗಿದ್ದು ಅಲ್ಲಿನ ಮೂಲನಿವಾಸಿ ಅಮೆರಿಂಡಿಯನರ ಮದ್ದು ಮತ್ತು ಆಚರಣೆಗಳಲ್ಲಿ ಬಳಕೆಯಾಗುತ್ತದೆ.



ಪೇಜಾ

Follow Us On: Pingara News





ಭಕ್ತ ಮಹಾಶಯರೇ,

ಸ್ವಸ್ತಿ ಶ್ರೀ ಶೋಭಕೃತ್ ನಾಮ ಸಂವತ್ಸರದ ವೃಷಭ ಮಾಸ ೭ ಸಲುವ ಜ್ಯೇಷ್ಠ ಶುಕ್ಲ ೨ಿಯು ದಿನಾಂಕ 21-05-2023ನೇ ರವಿವಾರ ಬೆಳಿಗ್ಗೆ ಗಂಟೆ 5:45ಕ್ಕೆ ಮೇಷ ಲಗ್ನ ಸುಮಹೂರ್ತದಲ್ಲಿ ಶ್ರೀ ಕ್ಷೇತ್ರ ತೋಕೂರು ಶ್ರೀ ಸುಬ್ರಹ್ಮಣ್ಯ ದೇವರಿಗೆ ನವೀಕೃತ ಶಿಲಾಮಯ ದೇಗುಲದಲ್ಲಿ

**"ಅಷ್ಟಬಂಧ ಬ್ರಹ್ಮಕುಂಭಾಭಿಷೇಕ"**

ದಿನಾಂಕ: 21-05-2023ನೇ ಭಾನುವಾರ **ಹಗಲು ಮಹಾರಥೋತ್ಸವ, ಮಹಾ ಅನ್ನಸಂತರ್ಪಣೆ**

ದಿನಾಂಕ: 23-05-2023ನೇ ಮಂಗಳವಾರ **ನಾಗಮಂಡಲೋತ್ಸವ**

ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಗಳ ಆಚಾರ್ಯತ್ವದಲ್ಲಿ ಸಂಪನ್ನಗೊಳ್ಳಲಿದೆ. ಆ ಪ್ರಯುಕ್ತ ತಾ. 10-05-2023ರಿಂದ 23-05-2023ರ ವರೆಗೆ ಜರಗುವ ಧಾರ್ಮಿಕ ಕಾರ್ಯಕ್ರಮಗಳಿಗೆ ತಾವು ಇಷ್ಟಮಿತ್ರರು ಹಾಗೂ ಭಕ್ತ ಬಾಂಧವರೊಂದಿಗೆ ಚಿತ್ತೈಸಿ, ಈ ಮಂಗಳ ಕಾರ್ಯದಲ್ಲಿ ತ್ರಿಕರಣಪೂರ್ವಕ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಧರ್ಮದರ್ಶಿ ಡಾ। ಹರಿಕೃಷ್ಣ ಪುನರೂರು**
ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ

**ಹರಿದಾಸ್ ಭಟ್**
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ

**ಸಂತೋಷ್ ಕುಮಾರ್ ಹೆಗ್ಡೆ**
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ

ಪದಾಧಿಕಾರಿಗಳು ಮತ್ತು ಸದಸ್ಯರು, ವ್ಯವಸ್ಥಾಪನಾ ಸಮಿತಿ, ಜೀರ್ಣೋದ್ಧಾರ ಸಮಿತಿ, ಬ್ರಹ್ಮಕಲಶೋತ್ಸವ ಸಮಿತಿ,
ಅರ್ಚಕ ವೃಂದ, ಸಿಬ್ಬಂದಿ ವರ್ಗ ಮತ್ತು ಗ್ರಾಮಸ್ಥರು ಹಾಗೂ ಊರ ಪರವೂರ ಭಕ್ತಾದಿಗಳು

**ಕಾರ್ಯಕ್ರಮಗಳ ವಿವರ**

ಮೇ 20, ಶನಿವಾರ 2023: ಬೆಳಿಗ್ಗೆ 6ರಿಂದ ರುದ್ರಯಾಗ, ತತ್ತ್ವಹೋಮ, ತತ್ತ್ವಕಲಶ, ತತ್ತ್ವಕಲಶಾಭಿಷೇಕ ಮಹಾಪೂಜೆ, ಪ್ರಸಾದ ವಿತರಣೆ. ಮಧ್ಯಾಹ್ನ 12:30ರಿಂದ ಅನ್ನಸಂತರ್ಪಣೆ. ಸಾಯಂ. 4ರಿಂದ ಶ್ರೀ ಸುಬ್ರಹ್ಮಣ್ಯ ದೇವರಿಗೆ 97 ದ್ರವ್ಯ ಮೀಆತ 501 ಕಲಶಾಧಿವಾಸ, ಅಧಿವಾಸ ಹೋಮಗಳು, ಬ್ರಹ್ಮರಥ ಹಾಗೂ ಚಂದ್ರಮಂಡಲ, ರಥದಲ್ಲಿ ವಾಸ್ತು ಪ್ರಕ್ರಿಯೆ, ಉತ್ಸವಬಲಿ, ಮಹಾಪೂಜೆ, ಪ್ರಸಾದ ವಿತರಣೆ. ಮಧ್ಯಾಹ್ನ 2:30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 4ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ

ಮೇ 21, ರವಿವಾರ 2023: ಬೆಳಿಗ್ಗೆ 5ರಿಂದ ಸುಬ್ರಹ್ಮಣ್ಯ ಸಹಸ್ರನಾಮ ಮಂತ್ರ ಹೋಮ, ಬೆಳಿಗ್ಗೆ 5:45ಕ್ಕೆ ಮೇಷ ಲಗ್ನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ಬ್ರಹ್ಮಕುಂಭಾಭಿಷೇಕ, ಕಲಶಾಭಿಷೇಕ, ಪ್ರಸನ್ನಪೂಜೆ, ನ್ಯಾಸ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ. ಮಧ್ಯಾಹ್ನ 11ರಿಂದ ಹಗಲು ರಥೋತ್ಸವ, ಪಲ್ಲಪೂಜೆ, ಪ್ರಸನ್ನಪೂಜೆ; 12:30ರಿಂದ ಮಹಾ ಅನ್ನಸಂತರ್ಪಣೆ. ಸಂಜೆ 7ರಿಮದ ಉತ್ಸವ ಬಲಿ, ಮಹಾಪೂಜೆ, ಶ್ರೀ ಭೂತಬಲಿ, ಶಯನೋತ್ಸವ, ಕವಾಟ ಬಂಧನ. ಮಧ್ಯಾಹ್ನ 12:30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 4ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ

ಮೇ 22, ಸೋಮವಾರ 2023: ಬೆಳಿಗ್ಗೆ 8ರಿಂದ ಕವಾಟೋದ್ಘಾಟನೆ, ತುಲಾಭಾರಸೇವೆ, ಮಹಾಪೂಜೆ. ಮಧ್ಯಾಹ್ನ 12:30ರಿಂದ ಅನ್ನಸಂತರ್ಪಣೆ ಸಂಜೆ 5ರಿಂದ ನಾಗಮಂಡಲ ಚಪ್ಪರದಲ್ಲಿ ವಾಸ್ತು ಪ್ರಕ್ರಿಯೆ; 6ಕ್ಕೆ ಯಾತ್ರಾಬಲಿ, ಓಕುಳಿ, ಮಹಾರಥೋತ್ಸವ, ಸವಾರಿ, ಕಟ್ಟೆಪೂಜೆ, ಅವಭೃತ ಸ್ನಾನ, ಜಳಕದ ಬಲಿ, ಧ್ವಜಾವರೋಹಣ, ಪ್ರಸನ್ನಪೂಜೆ, ಮಹಾಪೂಜೆ, ಪ್ರಸಾದ ವಿತರಣೆ. ರಾತ್ರಿ 11ಕ್ಕೆ ಕಾಂತೇರಿ ಧೂಮಾವತಿ ದೈವದ ನೇಮೋತ್ಸವ

ಮೇ 23, ಮಂಗಳವಾರ 2023: ಬೆಳಿಗ್ಗೆ 9ರಿಂದ ಮಂಗಳಗಣಯಾಗ, ಮಹಾ ಸಂಪ್ರೋಕ್ಷಣೆ, ಮಹಾ ಮಂತ್ರಾಕ್ಷತೆ, ನಾಗಸನ್ನಿಧಿಯಲ್ಲಿ ಪ್ರಾಯಶ್ಚಿತ್ತ ಪೂರ್ವಕ ಕಲಶಾಧಿವಾಸ, ಅಧಿವಾಸಹೋಮ, ಕಲಶಾಭಿಷೇಕ, ಮಹಾಪೂಜೆ, ಬ್ರಾಹ್ಮಣ ಸುವಾಸಿನೀ ವಟು ಆರಾಧನೆ. ಮಧ್ಯಾಹ್ನ 2:30ರಿಂದ ಮಹಾ ಅನ್ನಸಂತರ್ಪಣೆ. ಸಂಜೆ ದೀಪಾರಾಧನೆ ಪೂಜೆ, ನಾಗ ಸನ್ನಿಧಿಯಲ್ಲಿ ಹಾಲಿಟ್ಟು ಸೇವೆ. ರಾತ್ರಿ 9ಕ್ಕೆ ಸಗ್ರಿ ಶ್ರೀ ಗೋಪಾಲಕೃಷ್ಣ ಸಾಮಗರ ನೇತೃತ್ವದಲ್ಲಿ ಮುದ್ದೂರು ಶ್ರೀ ಕೃಷ್ಣಪ್ರಸಾದ ವೈದ್ಯ ಬಳಗದವರ ಸಹಭಾಗಿತ್ವದಲ್ಲಿ "ನಾಗ ಮಂಡಲೋತ್ಸವ, ಪ್ರಸಾದ ವಿತರಣೆ. ಬೆಳಿಗ್ಗೆ 11:30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 4ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ

(ಪ್ರತಿದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಭಜನಾ ಸಂಕೀರ್ತನೆ; ಸಂಜೆ 3ರಿಂದ 4:30 ಭಗವದ್ಗೀತಾ ಪಾರಾಯಣ)


Licensed to Post without repayment Licence No.SKWPP/MNG/183/2022-24 Regd. No. MNG/954/2022-2024
Edited, Published & Owned by Raymond D'Cunha, Published at No. 10-156, Suvarna road End, Kankanady 'B Village', Kankanady Post, Mangalore - 575002, DK
Printed by Him at Pingara Printers, No. No. 10-156, Suvarna Road End, Kankanady 'B Village', Kankanady Post, Mangalore - 575002, DK